29 ಸೆಪ್ಟೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 200 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ದುಬೈನಲ್ಲಿ ಭಾನುವಾರ ಪಾಕಿಸ್ತಾನ ವಿರುದ್ಧ ನಡೆದ ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ 4 ವಿಕೆರ್ಟ ಪಡೆದು ಸಂಭ್ರಮಿಸಿದ ಭಾರತದ ಕುಲದೀಪ್ ಯಾದವ್...

ಕಂಪಳನ ರಾಜ ಭಕ್ತಿ » 2

ಭಾರತ ವಿರೋಧಿ ಹೇಳಿಕೆ ಮುಂದುವರಿಸಿದ ಅಮೇರಿಕಾ » 3

ಪ್ರವಾಹ : ಕೇಂದ್ರದಿಂದ ಅಗತ್ಯ ನೆರವು ನೀಡಲು ಬದ್ಧ » 4

ಧಾರಾಕಾರ ಮಳೆಗೆ ಉತ್ತರ ಕರ್ನಾಟಕ ತತ್ತರ

- ಹಲವು ಗ್ರಾಮಗಳ ಸಂಪರ್ಕ ಕಡಿತ
- ಪ್ರವಾಹ ಪೀಡಿತ ಸ್ಥಳಕ್ಕೆಂದು ಸಿದ್ದರಾಮಯ್ಯ ಭೇಟಿ

• ಪ್ರಜೋದಯ ವರದಿ

ಬೆಂಗಳೂರು: ಉತ್ತರ ಕರ್ನಾಟಕದ ಕಲಬುರಗಿ, ಕೊಪ್ಪಳ, ಬೀದರ್, ಯಾದಗಿರಿ ಜಿಲ್ಲೆಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದ್ದು, ಜನರು ತತ್ತರಿಸಿದ್ದಾರೆ.

ಮಹಾರಾಷ್ಟ್ರದ ಸೀನಾ, ಉಜನಿ, ವೀರ್ ಜಲಾಶಯಗಳಿಂದ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಸೊನ್ನ ಭೀಮಾ ಬ್ಯಾರೇಜಿಗೆ 2.85 ಲಕ್ಷ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಅದರಿಂದಾಗಿ ಕಲಬುರಗಿ-ಜೇವರ್ಗಿ ಮಧ್ಯದ ಕೋನ ಹಿಪ್ಪರಗಾ ಸಮೀಪದ ಮತ್ತೊಂದು ಸೇತುವೆ ಮುಳುಗಡೆಯಾಗಿದೆ. ಹೀಗಾಗಿ ಕಳೆದ ಎರಡು ದಿನಗಳಿಂದ ಭಾರಿ ವಾಹನಗಳು ರಸ್ತೆ ಬದಿ ನಿಂತಿವೆ. ಸೇತುವೆಯ ಬಳಿ ಪೊಲೀಸರು ಬ್ಯಾರಿಕೇಡ್ ಹಾಕಿ ಸಂಚಾರ ನಿರ್ಬಂಧಿಸಿದರೂ ಬೈಕ್ ಸವಾರರು, ಪಾದಚಾರಿಗಳು ನೀರಿನಲ್ಲಿ ದಾಟಿಕೊಂಡು ಬಂದರು. ಅದನ್ನು ಗಮನಿಸಿದ ತಹಶೀಲ್ದಾರ್ ಕೆ.ಆನಂದಶೀಲ್ ಹಾಗು ಪೊಲೀಸರು ಪ್ರವಾಹದ ನೀರಿನಲ್ಲಿ ಬರದಂತೆ ತಾಕೀತು ಮಾಡಿದರು. ಆದಾಗ್ಯೂ ಜನರು ಬರುವುದು ಮುಂದುವರಿದೇ ಇತ್ತು.

ಬೀದರ್ ಜಿಲ್ಲೆಯ ಹುಲಸೂರ, ಕಮಲನಗರ ಹಾಗು ಔರಾದ್ ತಾಲ್ಲೂಕಿನ

ಕೆಲವು ಭಾಗಗಳಲ್ಲಿ ಭಾನುವಾರವೂ ಮಳೆಯಾಗಿದೆ. ಮಾಂಜ್ರಾ ನದಿಯಲ್ಲಿ ಪ್ರವಾಹ ಬಂದಿರುವುದರಿಂದ ಹುಲಸೂರ ತಾಲ್ಲೂಕಿನ ಸಾಯಗಾಂವ್‌ವಲಂಡಿ ರಸ್ತೆ ಸಂಪೂರ್ಣ ಜಲಾವೃತವಾಗಿದ್ದು, ಇಪ್ಪತ್ತು ಹಳ್ಳಿಗಳ ಸಂಪರ್ಕ ಕಡಿತಗೊಂಡಿದೆ. ತಾಲ್ಲೂಕಿನ ಕೊಂಗಳಿ ಗ್ರಾಮದ ಸುತ್ತಮುತ್ತ ನೀರು ಆವರಿಸಿಕೊಂಡಿದ್ದು, ದ್ವೀಪವಾಗಿ ಬದಲಾಗಿದೆ. ಗ್ರಾಮಸ್ಥರು ಎಲ್ಲಿಗೂ ಹೋಗಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂದು ಸಿದ್ದರಾಮಯ್ಯ ಭೇಟಿ:

ಪ್ರವಾಹದಿಂದಾಗಿ ಭೀಮಾ ತೀರದ ಪ್ರದೇಶಗಳಲ್ಲಿ ಉಂಟಾಗಿರುವ ಹಾನಿ ಬಗ್ಗೆ ಪರಿಶೀಲನೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಸಚಿವರೇ ಎಲ್ಲಿದ್ದಿದ್ದೀರಿ... ಎಲ್ಲಿ ಮಲಗಿದ್ದೀರಿ...

ಕಲಬುರಗಿ ಸೇರಿ ಉತ್ತರ ಕರ್ನಾಟಕದ ಹಲವೆಡೆ ಪ್ರವಾಹ ಪರಿಸ್ಥಿತಿ ತಲೆದೂರಿದ್ದರ ಕುರಿತು ಆ ಭಾಗದ ಸಚಿವರನ್ನು ಜೆಡಿಎಸ್ ತರಾಟೆಗೆ ತೆಗೆದುಕೊಂಡಿದೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ಉತ್ತರ ಕರ್ನಾಟಕ ಭಾಗದ ಉಸ್ತುವಾರಿ ಸಚಿವರೇ ಎಲ್ಲಿದ್ದೀರಿ. ಎಲ್ಲಿ ಮಾಯಾ ವಾಗಿದ್ದೀರಿ ಎಂದು ಪ್ರಶ್ನಿಸಿದೆ. ಭೀಮಾ ನದಿಯ ಪ್ರವಾಹಕ್ಕೆ ಹಲವು ಜಿಲ್ಲೆಗಳು ಸಂಪೂರ್ಣ ಮುಳುಗಡೆಯಾಗಿದ್ದು, ಜನರು ನರಕಯಾತನೆ ಅನುಭವಿಸುತ್ತಿದ್ದಾರೆ. ಹಲವು ಜಿಲ್ಲೆಯಲ್ಲಿ ಸಾವು ನೋವುಗಳಾಗಿವೆ. ನೆರೆಯಿಂದ ಗ್ರಾಮಗಳೇ ಮುಳುಗಡೆ ಯಾಗಿವೆ. ರಸ್ತೆ, ಸೇತುವೆಗಳು ಮುಳುಗಿವೆ. ಕುಡಿಯುವ ನೀರು, ವಿದ್ಯುತ್ ಸಂಪರ್ಕ ವ್ಯತ್ಯಯವಾಗಿದೆ. ಅಪಾರ ಪ್ರಮಾಣದಲ್ಲಿ ಬೆಳೆ ನಾಶವಾಗಿದೆ. ಉಸ್ತುವಾರಿ ಮಂತ್ರಿಗಳ ಪತ್ತೆಯೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದೆ. ನಿಮ್ಮ ಜಿಲ್ಲೆಗಳು ಸಂಪೂರ್ಣ ಮುಳುಗಿ ರುವಾಗ ಎಲ್ಲಿ ಓಡಿ ಹೋಗಿದ್ದೀರಿ. ಜನರ ದುಃಖ, ಆರ್ತ ನಾದ ನಿಮಗೆ ಕೇಳುತ್ತಿಲ್ಲವೇ. ನೆರೆ ಸಂತ್ರಸ್ತ ರಿಗೆ ಆಶ್ರಯ ಕೇಂದ್ರಗಳನ್ನು ನಿರ್ಮಿಸಿ ಆಗತ್ಯ ಸೌಲಭ್ಯ ಕಲ್ಪಿಸಿ, ನೆರೆ ಹಾನಿಯಿಂದ ನಷ್ಟಕ್ಕೊಳಗಾದವರಿಗೆ ತ್ವರಿತವಾಗಿ ಪರಿಹಾರ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲೆಂದು ಆಗ್ರಹಿಸಿದೆ.

ಕಲಬುರಗಿಯಲ್ಲಿ ಅಧಿಕಾರಿಗಳ ಸಭೆ ನಡೆಸಲಿರುವ ಮುಖ್ಯಮಂತ್ರಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳ ಪರಿಶೀಲನೆ ನಡೆಸಲಿದ್ದಾರೆ. ಕಲಬುರಗಿ, ಬೀದರ್, ಯಾದಗಿರಿ ಹಾಗು ವಿಜಯಪುರ ಜಿಲ್ಲೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಮತ್ತು ಪೌರಾಡಳಿತ ಸಚಿವ ರಹೀಂ ಖಾನ್ ಅವರು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಬೀದರ್ ಜಿಲ್ಲೆಯಲ್ಲಿ ಉಂಟಾಗಿರುವ ಪ್ರವಾಹ ಪರಿಸ್ಥಿತಿ ಹಾಗು ಕೈಗೊಂಡಿರುವ ಪರಿಹಾರ ಕಾರ್ಯಗಳನ್ನು ವಿವರಿಸಿದರು.

ರಕ್ಷಣೆ-ಪರಿಹಾರಕ್ಕೆ ಸಿ.ಎಂ. ಸೂಚನೆ

ನಿರಂತರ ಮಳೆ ಹಾಗು ಕೃಷ್ಣಾ ನದಿಯ ಮಹಾರಾಷ್ಟ್ರದ ಉಜನಿ ಮತ್ತು ನೀರ ಜಲಾಶಯದಿಂದ ಹೆಚ್ಚಿನ ಪ್ರಮಾಣದ ನೀರನ್ನು ಹೊರಬಿಟ್ಟಿರುವುದರಿಂದ ಭೀಮ ನದಿ ತೀರದಲ್ಲಿ ಹಾಗು ಬೆಣ್ಣೆತೋರಾದಲ್ಲಿ ಪ್ರವಾಹದ ಪರಿಸ್ಥಿತಿ ಉದ್ಭವಿಸಿರುವ ಹಿನ್ನಲೆಯಲ್ಲಿ ಪರಿಸ್ಥಿತಿಯ ಮೇಲೆ ತೀವ್ರ ನಿಗಾವಹಿಸಿ, ಆಗತ್ಯ ರಕ್ಷಣಾ ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಮುಖ್ಯ

» ನಾಲ್ಕನೇ ಪುಟದಲ್ಲಿ

ರಾಜಕೀಯ ಕಾರಣಕ್ಕೆ ಸಮೀಕ್ಷೆ: ಆರ್.ಅಶೋಕ್ ಆರೋಪ

• ಪ್ರಜೋದಯ ವರದಿ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಜಾತಿ ಸಮೀಕ್ಷೆಯಲ್ಲಿ ಜನರು ವೈಯಕ್ತಿಕ ಮಾಹಿತಿಗಳನ್ನು ನೀಡಲೇಬೇಕು ಎಂದೇನಿಲ್ಲ. ಸೂಕ್ತ ಎನಿಸಿದ ಪ್ರಶ್ನೆಗಳಿಗೆ ಮಾತ್ರ ಜನರು ಉತ್ತರ ನೀಡಬೇಕು. ಸಮೀಕ್ಷೆ ವಿಚಾರ ದಲ್ಲಿ ಜನರು ಎಚ್ಚರವಾಗಿರಬೇಕೆಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಮಾಡುತ್ತಿ ರುವ ಜಾತಿ ಸಮೀಕ್ಷೆಯಲ್ಲಿ ಜನರು ಎಲ್ಲಾ ವಿವರ ಬಹಿರಂಗಪಡಿಸ ಬಾರದು. ಜನರ ಬಳಿ ಏನೇನೋ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇಂತಹ ಪ್ರಶ್ನೆಗಳಿಗೆ ಉತ್ತರ ನೀಡುವುದು ಜನರಿಗೆ ಬಿಟ್ಟ ವಿಚಾರ. ಅದನ್ನು ಕಾಂಗ್ರೆಸ್ ರಾಜಕೀಯಕ್ಕೆ ಬಳಸಿ ಕೊಳ್ಳುತ್ತಿದೆ. ಖಿಜಾನೆಯಲ್ಲಿ ಹಣ ವಿಲ್ಲದೆ, ರೇಷನ್ ಕಾರ್ಡ್ ರದ್ದು ಮಾಡುತ್ತಿದ್ದಾರೆ. ಅದಕ್ಕಾಗಿ ಮಾನ ದಂಡ ಬೇಕಾಗುತ್ತದೆ. ಈ ಕಾರಣಕ್ಕಾಗಿ ಹಾಗು ಯೋಜನೆಗಳಿಗೆ ಕತ್ತರಿ ಹಾಕಲು ಜಾತಿ ಸಮೀಕ್ಷೆ ಮಾಡಲಾ ಗುತ್ತಿದೆ ಎಂದರು.

ಮುಂದಿನ ಬಜೆಟ್ ರಚನೆ ಮುಖ್ಯ ಮಂತ್ರಿ ಸಿದ್ದರಾಮಯ್ಯನವರಿಗೆ ಕಗ್ಗಂಟಾಗಿದೆ. ಅದಕ್ಕಾಗಿ ಹಣ ಉಳಿಸ ಬೇಕಿದೆ. ಇದು ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ ಅಲ್ಲ, ಸಿದ್ದರಾಮಯ್ಯನವರ ಜಾತಿ ಸಮೀಕ್ಷೆ. ಜನರಿಗೆ ಪಂಗನಾಮ ಹಾಕುವ ಸಮೀಕ್ಷೆ. ಯಾರೂ ವೈಯಕ್ತಿಕ ದಾಖಲೆಗಳನ್ನು ನೀಡ ಬಾರದು. ಯಾವ್ಯಾವ ಪ್ರಶ್ನೆಗೆ ಉತ್ತರ ಕೊಡಬಹುದೋ ಅಷ್ಟನ್ನು ಮಾತ್ರ ನೀಡಿದರೆ ಸಾಕು. ಹೈಕೋರ್ಟ್ ಕೂಡ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಬೇಕಿಲ್ಲ ಎಂದಿದೆ ಎಂದರು.

ತಮಿಳುನಾಡಿನ ಕರೂರಿನಲ್ಲಾದ ಕಾಲ್ತುಳಿತದ ಘಟನೆಯಿಂದ ಇಡೀ ದೇಶ ಬೆಚ್ಚಿಬಿದ್ದಿದೆ. ವಿಧಾನಸೌಧದ ಮುಂಭಾಗ ಕಾಂಗ್ರೆಸ್ ಸರ್ಕಾರದಿಂದ ನಡೆದಿದ್ದ ಆರ್‌ಸಿಬಿ ಸಂಭ್ರಮಾಚರಣೆ ಯಲ್ಲಾದ ಕಾಲ್ತುಳಿತ ಘಟನೆ

» ನಾಲ್ಕನೇ ಪುಟದಲ್ಲಿ

ಪ್ರತ್ಯೇಕ ಅಪಘಾತ : ಆರು ಮಂದಿ ಸಾವು

• ಪ್ರಜೋದಯ ವರದಿ

ಹಾಸನ: ಜಿಲ್ಲೆಯ ವಿವಿಧೆಡೆ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಆರು ಮಂದಿ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್‌ಗೆ ಬೈಕ್ ಡಿಕ್ಕಿಯಾಗಿ ಮೂವರು ಯುವಕರ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ತಾಲ್ಲೂಕಿನ ಎಡೆಗೌಡನಹಳ್ಳಿಯ ಮೈಸೂರು-ಹಾಸನ ರಸ್ತೆಯಲ್ಲಿ ಶನಿವಾರ ರಾತ್ರಿ ನಡೆದಿದೆ. ಹೊಳೆನರ ಸೀಪುರ ಇರ್ಫಾನ್ ಪಾಷ (25), ತರುಣ್ (26) ಹಾಗು ರೇವಂತ್ (27) ಮೃತರು. ದೊಡ್ಡಹಳ್ಳಿ ಬಾರೆ ಸಂತೆಗೆ ಹೋಗಿ ಬರುವುದಾಗಿ ಮೂವರು ಒಂದೇ ಬೈಕ್‌ನಲ್ಲಿ ತೆರಳಿದ್ದರು. ಎಡೆಗೌಡನ ಹಳ್ಳಿ ಸಮೀಪ ಮೈಸೂರು ಕಡೆಯಿಂದ ವೇಗವಾಗಿ ಬಂದ ಬಸ್ ಡಿಕ್ಕಿಯಾಗಿದೆ. ತಲೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆ ಇರ್ಫಾನ್ ಸ್ಥಳದಲ್ಲೇ ಮೃತಪಟ್ಟರೆ, ಇಬ್ಬರು ಆಸ್ಪತ್ರೆಯಲ್ಲಿ ಅಸುನೀಗಿ ದ್ದಾರೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಹಿರೀ ಸಾವೆ ಠಾಣೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 75ರ ರಾಜಾಪುರ ಗೇಟ್ ಬಳಿ ಕಾರು ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿಯಾಗಿ ಪಲ್ಟಿಯಾದ

ಪರಿಣಾಮ ಮಹಿಳೆ ಮೃತಪಟ್ಟು ಮೂವರು ಗಾಯಗೊಂಡಿರುವ ಘಟನೆ ನಡೆದಿದೆ.

ಬೆಂಗಳೂರು ವಿಜಯ ನಗರದ ಯು.ಆರ್.ಶಕುಂತಲಾ ಮೃತರು. ಪುತ್ರ ರಾಘವೇಂದ್ರ, ಸೊಸೆ ರಶ್ಮಿ, ಮೊಮ್ಮಗಳು ರಾಧಿಕಾ ಜೊತೆಗೆ ಉಡುಪಿಗೆ ತೆರಳುತ್ತಿದ್ದರು. ಚಾಲಕ ರಾಘವೇಂದ್ರ ಅವರ ನಿಯಂತ್ರಣ ತಪ್ಪಿ ಕಾರು ಡಿವೈಡರ್‌ಗೆ ಡಿಕ್ಕಿಯಾದ್ದರಿಂದ ಪಲ್ಟಿಯಾಗಿ ಎಲ್ಲರೂ ಗಂಭೀರ ಗಾಯಗೊಂಡಿದ್ದರು. ಆ್ಯಂಬುಲೆನ್ಸ್ ಮೂಲಕ ಎಲ್ಲರನ್ನೂ ಚನ್ನರಾಯ ಪಟ್ಟಣ ಆಸ್ಪತ್ರೆಗೆ ದಾಖಲಿಸಿದ್ದರು.

ಗಂಭೀರ ಗಾಯಗೊಂಡಿದ್ದ ಶಕುಂತಲಾ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿ ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿ ದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್ ಡಿಕ್ಕಿ : ವ್ಯಕ್ತಿ ಸಾವು

ಕೆಎಸ್‌ಆರ್‌ಟಿಸಿ ಐರಾವತ ಬಸ್ ಡಿಕ್ಕಿಯಾಗಿ ಗೂಡ್ಸ್ ವಾಹನ ಚಾಲಕ ಮೃತಪಟ್ಟಿರುವ ಘಟನೆ ಸಕಲೇಶಪುರ ತಾಲ್ಲೂಕು ಆನೆಮಹಲ್ ಸಮೀಪ ನಡೆದಿದೆ.

ಬೆಂಗಳೂರು ಮೂಲದ ಹರೀಶ್ ಮೃತರು. ಬಸ್ ಚಾಲಕ ಯಲ್ಲಪ್ಪ ಶಂಕರಪ್ಪ ಹೊಸಕೋರಿ ಅವರು ಕುಂದಾಪುರದಿಂದ ಬೆಂಗಳೂರಿಗೆ ಬರುತ್ತಿದ್ದಾಗ ಆನೆಮಹಲ್ ದರ್ಗಾ ಹತ್ತಿರ ಎದುರಿನಿಂದ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಚಾಲಕ ಹರೀಶ್ ಹಾಗು ಮತ್ತೊಬ್ಬ ಸುನಿಲ್ ಕುಮಾರ್ ಎಂಬುವರಿಗೆ ಗಂಭೀರ ಗಾಯಗಳಾಗಿದ್ದವು. ತಕ್ಷಣವೇ ಅವ ರನ್ನು ಆಸ್ಪತ್ರೆಗೆ ದಾಖಲಿಸಲಾ ಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಹರೀಶ್ ಮೃತಪಟ್ಟಿದ್ದಾರೆ. ಸಕಲೇಶಪುರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತೇಶಿವರ ಕೆರೆಯಲ್ಲಿ ಸಾಹಿತಿ ಭೈರಪ್ಪರ ಅಸ್ಥಿ ವಿಸರ್ಜನೆ

ಭೈರಪ್ಪ ಹೆಸರಲ್ಲಿ ಪ್ರತಿವರ್ಷ ಕಾರ್ಯಕ್ರಮ : ಶಾಸಕ ಸಿ.ಎನ್.ಬಾಲಕೃಷ್ಣ ವಾಗ್ದಾನ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಹಿರಿಯ ಸಾಹಿತಿ ದಿವಂಗತ ಡಾ.ಎಸ್.ಎಲ್. ಭೈರಪ್ಪ ಅವರ ಅಸ್ಥಿ ವಿಸರ್ಜನೆ ಹುಟ್ಟೂರು ಸಂತೇಶಿವರ ಕೆರೆಯಲ್ಲಿ ಭಾನುವಾರ ಸ್ವಾರ್ಥ ಹಿಂದೂ ಸಂಪ್ರದಾಯದಂತೆ ನೆರವೇರಿತು. ಭೈರಪ್ಪನವರ ಪುತ್ರರಾದ ರವಿಶಂಕರ್ ಹಾಗು ಉದಯ ಶಂಕರ್ ಅಸ್ಥಿ ವಿಸರ್ಜನೆ ಮಾಡಿದರು. ಸೆ. 26 ರಂದು ಮೈಸೂರಿನ ಚಾಮುಂಡಿ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿತ್ತು. ಭೈರಪ್ಪನವರ ಆಸೆಯಂತೆ ಹುಟ್ಟೂರಿನಲ್ಲೂ ಧಾರ್ಮಿಕ ಕೈಂಕರ್ಯವನ್ನು ಪುತ್ರರು ಗ್ರಾಮಸ್ಥರ ಸಹಕಾರದಿಂದ ನೆರವೇರಿಸಿದರು.

ಬ್ರಾಹ್ಮಣ ಸಂಪ್ರದಾಯದ ಪೂಜೆ: ಪ್ರಭಾಕರ್ ಜೋಯಿಸ್, ಅನಂತ ರಾಮ ಜೋಯಿಸ್, ವೇಣು ಗೋಪಾಲ್, ಎಸ್.ಡಿ. ನಾಗರಾಜ್ ರಾವ್ ಅವರು ಸ್ವಸ್ತಿಕ್ ಮಂತ್ರ ವೇದ ಘೋಷ ಶಾಂತಿ ಮಂತ್ರ ಸೇರಿ ವಿವಿಧ ಮಂತ್ರಗಳನ್ನು ಪಠಣ ಮಾಡಿ ಪೂಜೆ ನೆರವೇರಿಸಿದರು.

ಡಾ. ಎಸ್.ಎಲ್. ಭೈರಪ್ಪ ಅವರ ಕಿರಿಯ ಪುತ್ರ ಉದಯಶಂಕರ್ ಅವರು ಮೈಸೂರಿನಿಂದ ಅವರ ತಂದೆ ಯವರ ಚಿತಾಭಸ್ಮ ತಂದಿದ್ದರು. ಅವರನ್ನು ಗ್ರಾಮದ ಪ್ರಾರಂಭದಲ್ಲಿ

ಗ್ರಾಮಸ್ಥರು ಹಾಗು ಶಾಸಕ ಸಿ.ಎನ್. ಬಾಲಕೃಷ್ಣ ಬರಮಾಡಿಕೊಂಡರು. ಭೈರಪ್ಪನವರು ಬಾಲ್ಯದಲ್ಲಿ ಈಜಾಡು ತ್ತಿದ್ದ ಕೆರೆ ಈಗ ಸುತ್ತಲಿನ 30 ಹಳ್ಳಿಗಳಿಗೆ ಅಂತರ್ಜಲ ಒದಗಿಸುತ್ತಿದೆ. ಕೆರೆ ಭರ್ತಿಗೆ ಕ್ರಮ ಕೈಗೊಳ್ಳಬೇಕೆಂದು ಭೈರಪ್ಪನವರು ಕಳೆದ ಬಿಜೆಪಿ ಸರ್ಕಾ ರಕ್ಕೆ ಒತ್ತಾಯಿಸಿದ್ದರು. ಅದರಂತೆ ಬಿ. ಎಸ್.ಯಡಿಯೂರಪ್ಪ ಹಾಗು ಬಸವರಾಜ ಬೊಮ್ಮಾಯಿ ಅವರ ಅಡಳಿತಾವಧಿಯಲ್ಲಿ ಅನುದಾನ ಬಿಡುಗಡೆ ಯಾಗಿ ಕೆರೆ ಭರ್ತಿಯಾಗಿದೆ. ಅದೇ ಕೆರೆಯಲ್ಲಿ ತೆಪ್ಪದಲ್ಲಿ ಸಾಗಿದ ಭೈರಪ್ಪನವರ ಪುತ್ರರು ಅಸ್ಥಿ ವಿಸರ್ಜನೆ ಮಾಡಿದರು. ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಮೈಸೂರಿನಲ್ಲಿ ಭೈರಪ್ಪ ನವರ ಸ್ಮಾರಕ ನಿರ್ಮಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಅದೇ ರೀತಿ ಹುಟ್ಟೂರಿನಲ್ಲಿ ಪ್ರತಿಮೆ, ತಾಲ್ಲೂಕು ಕೇಂದ್ರದಲ್ಲಿ ಅವರ ಹೆಸರಿನಲ್ಲಿ ಸಮುದಾಯ ಭವನ ನಿರ್ಮಿಸಬೇಕು. ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಭೈರಪ್ಪನವರ ಸ್ಮರ ಣಾರ್ಥ ಪ್ರತಿವರ್ಷ ಹುಟ್ಟೂರಿನಲ್ಲಿ 2 ದಿನ ಸಾಹಿತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದರು.

ಮನದ ಮಾತಿನಲ್ಲಿ ಭೈರಪ್ಪ ಸ್ಮರಿಸಿದ ಮೋದಿ

ನವದೆಹಲಿ: ಇತ್ತೀಚೆಗೆ ನಿಧನರಾದ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅವರ ಕೊಡುಗೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಸ್ಮರಿಸಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಡಾ. ಎಸ್. ಎಲ್.ಭೈರಪ್ಪ ಅವರ ಕೊಡುಗೆ ಅಪಾರ. ನಾವಿಂದು ಅವರನ್ನು ಕಳೆದುಕೊಂಡಿದ್ದೇವೆ. ಅವರ ಜೊತೆ ನನಗೆ ಅಪಾರ ಒಡನಾಟವಿತ್ತು. ಕೆಲವು ವಿಷಯಗಳ ಕುರಿತು ನಾನು ಅವರೊಂದಿಗೆ ಚರ್ಚೆ ನಡೆಸಿದ್ದೆ. ಈ ಕಾರ್ಯಕ್ರಮದ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ ಎಂದಿದ್ದಾರೆ. ಅವರ ಕೃತಿಗಳು ಯುವ ಪೀಳಿಗೆಯ ವಿಚಾರಗಳಿಗೆ ಮಾರ್ಗದರ್ಶನ ನೀಡುತ್ತಿವೆ. ಕನ್ನಡದಲ್ಲಿ ಅವರು ರಚಿಸಿದ ಹಲವು ಕೃತಿಗಳ ಅನುವಾದಗಳು ಕೂಡ ಲಭ್ಯವಿವೆ. ನಮ್ಮ ಮೂಲ ಹಾಗು ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು ಹೊಂದಿರುವುದು ಎಷ್ಟೊಂದು ಮಹತ್ವಪೂರ್ಣವಾಗಿದೆ ಎಂಬುದನ್ನು ಅವರು ತಿಳಿಸಿದ್ದಾರೆ. ಎಸ್.ಎಲ್.ಭೈರಪ್ಪ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ಯುವಕರು ಭೈರಪ್ಪನವರ ಕಾದಂಬರಿ ಓದಬೇಕೆಂದು ಅವರು ಸಲಹೆ ನೀಡಿದ್ದಾರೆ.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ಮಾತನಾಡಿ, ವಿಶ್ವ ಮನ್ನಣೆ ಪಡೆದ ಎಸ್.ಎಲ್.ಭೈರಪ್ಪ ನಮ್

ಕಂಪಳನ ರಾಜ ಭಕ್ತಿ

ವಸಂತವೇ ಹಾಗೆ ಶೃಂಗಾರದ ಮಾಸ ಶಿಶಿರದ ಚಳಿಯ ಮೊಂಪರನ್ನು ಅಳಿಸಿ ಬೆಚ್ಚನೆಯ ಹೊಸ ಬಣ್ಣಗಳ ಹೊದಿಕೆ ಹೊದಿಸುವವ ವಸಂತ. ರೈತರಿಗೆ ತಮ್ಮ ಬಿತ್ತನೆಯ ಕಟಾವು ಮುಗಿಸಿ ಹಬ್ಬ ಜಾತ್ರೆ, ಉತ್ಸವಗಳ ನೆಪವಿಟ್ಟು ದೈವಾರಾಧನೆ ನೆಪಮಾಡಿ ಬಂಧುಗಳೊಂದಿಗೆ ಕರೆದುಣ್ಣುವ ಸಂಭ್ರಮ ಸಂತೋಷದ ಸುವರ್ಣಕಾಲವಿದು. ಎಲ್ಲೆಲ್ಲೂ ದುಂಬಿಗಳ ಕಲರವ, ಬಿರಿದ ಪುಷ್ಪಗಳ ಸುಗಂದವನ್ನು ಹೊತ್ತು ಸಾಗುವ ಮಂದಮಾರುತದ ತಂಗಾಳಿಯದು ಮತ್ತೊಂದು ಸಡಗರ.

ಈ ಸಡಗರಗಳ ಆರಂಭದಲ್ಲಿ ಬರುವ ಹಬ್ಬ, ಯುಗಾದಿ. ಪ್ರಕೃತಿಯು ಮಿಂದು ಶೃಂಗಾರ ಗೊಂಡಂತೆ ಜನರೂ ಎಣ್ಣೆ ಹೋಳಿಗೆಯಲ್ಲಿ ಮಿಂದೆದ್ದು ಸಂತೃಪ್ತ ಸಂತಸದಲ್ಲಿ ಯುಗಾದಿಯ ಬೇವು ಬೆಲ್ಲವನ್ನುಂಡು, ಮತ್ತೊಂದು ಉತ್ಸವಕ್ಕೆ ಸಜ್ಜಾಗುತ್ತಿದ್ದಾರೆ. ಚಿತ್ರದುರ್ಗದ ಬೀದಿ ಬೀದಿ ಗಳ ಗುಡಿ ಗೋಪುರಗಳು, ಹಸೆಮಣೆ ಏರುವ ನವ ವಧುವಿನಂತೆ ಶೃಂಗಾರ ಗೊಳ್ಳ ತೊಡಗಿದ್ದವು. ವಸಂತ ಋತುವಿನ ನವ ಚೈತನ್ಯವು, ದುರ್ಗವೇ ನಗುತ್ತಿರುವಂತೆ ನವ ವಧುವಿನಂತೆ ವೈಯ್ಯಾ ರದಿ ಬಳುಕುವಂತೆ ಭಾಸವಾಗುತ್ತಿತ್ತು. ಏಕೆಂದರೆ ಇದು ಯುಗಾದಿಯ ಜೊತೆಯಾಗೇ ಬರುವ ತ್ರಿಪುರ ಸುಂದರಮ್ಮ ಬರ್ಗೇರ್ ಅಮ್ಮನವರ ಉತ್ಸವದ ಆನಂದದ ತಯಾರಿಗೆ ಸಜ್ಜಾಗಿದ್ದ ಕಾಲ. ಊರಿನ ಮೊದಲ ಉತ್ಸವ. ಇಂತಹ ವೈಭವದ ದುರ್ಗದ ಉತ್ಸವವನ್ನು ನಾವೊಮ್ಮೆ ಕಣ್ತುಂಬಿ ಕೊಳ್ಳಬೇಕೆಂಬ ಹಂಬಮವನ್ನು ನಾಡಿಗರ ಎದೆಯಲ್ಲಿ ಮೂಡಿಸಿದ ವೈಭವದ ಉತ್ಸವ. ಈ ಅಂದ ಸವಿಯಲು ಎಲ್ಲರ ಮನೆಗೂ ಬರುವ ಅತಿಥಿಗಳ ದಂಡು ಗದ್ದೆ ಸಾಲಿನ ನಡುವೆ ಎದ್ದೆದ್ದು ಕೂರುವ ಗಿಳಿ ಹಿಂಡಿನಂತೆ ಗದ್ದಲದ ಓಲಗದಂತೆ ಕಾಣುತಿತ್ತು. ಬಂಧುಗಳಿಂದ ತುಂಬಿದ ಮನೆ ಮನೆಗಳೂ ಗಿಜು ಗುಡುತ್ತಿದ್ದವು. ಬಂಧುಗಳು ಬೀದಿ ಬೀದಿಯಲ್ಲಿ,ಸುತ್ತಿ ಇಡೀ ದುರ್ಗದ ಸೌಂದರ್ಯದ ಹೊಸ ಕಳೆಯನ್ನೂ, ನೋಡಿ ಸಂಭ್ರಮಿಸುತಿದ್ದರು. ಈ ಉತ್ಸವಕ್ಕಾಗಿ ಕೋಟೆ ಪೇಟೆಗಳು ಹೇಗೆ ಶೃಂಗಾರ ಗೊಳ್ಳುತ್ತಿವೆ. ಎಲ್ಲವೂ

ಕ್ರಮವಾಗಿ ನಡೆಯುತ್ತಿದೆಯೇ? ಸಿದ್ಧತೆಯನ್ನು ಕಣ್ಣಾರೆ ಕಂಡು ಮಾಹಿತಿ ಪಡೆಯಬೇಕು ಎಂದು ನಿರ್ಧರಿಸಿದ ನಾಯಕರು ಸಹೋದರ ಪರಶುರಾಮ ನೊಂದಿಗೆ ಮತ್ತು ಕೆಲವು ಅಶ್ವರೋಹಿಗಳೊಂದಿಗೆ ಅರಮನೆಯಿಂದ ಹೊರಗೆ ಹೊರಟಿದ್ದಾರೆ. ಕುದುರೆಯ ಮೇಲೆ ಕುಳಿತು ರಾಜ ಬೀದಿ ಬೀದಿಗಳಲ್ಲಿ ಸಂಚರಿಸುತ್ತಾ ಅವಲೋಕಿಸುತ್ತಿರುವ ನಾಯಕರನ್ನು ಕಂಡು ಪಶು ಪಕ್ಷಿಗಳು ಸರಸನೆ ಸರಿದು ನಿಂತು ಗೌರವ ಸೂಚಿಸುತ್ತಿದ್ದವು. ಝಗಮಗಿಸುತ್ತಿದ್ದ ಅಲಂಕಾರಿಕ ದೀಪಗಳು ಸೂರ್ಯನನ್ನು ನಾಚಿಸುವಂತಿದ್ದವು. ಹೀಗೆ ತಾರಾಮಂಡಲದಲ್ಲಿನ ನಕ್ಷತ್ರಗಳಂತೆ ಶೋಭಿಸುತ್ತಿರುವ ನಗರವನ್ನು ನೋಡುತ್ತಾ ಬೆಟ್ಟದ ಮೇಲಿನ ದೇವಾಲಯವನ್ನು ವೀಕ್ಷಿಸಿ, ನಂತರ ಅಜ್ಜಿಯ ಬಾಗಿಲಿನಿಂದ ಬೀಡಿನ ಬಾಗಿಲಿನವರೆಗೆ ಇಳಿದು ಕಡಿದಾದ ಬಂಡೆಗಲ್ಲುಗಳಿಗೆ ಹೊಂದಿ ಕೊಂಡಂತೆ ಇದ್ದ ಗರಡಿ ಮನೆಯ ಹತ್ತಿರದ ತಳವಾರ ಕಟ್ಟೆ, ಇದಕ್ಕೆ ಹೊಂದಿ ಕೊಂಡಂತೆ ಇದ್ದ ಗಣಪತಿ ದೇವಾಲಯ ಎಲ್ಲವನ್ನು ವೀಕ್ಷಿಸಿದರು. ಅಲ್ಲಿಂದ ಸಾಗುವ ಮೊದಲು ಗಣಪತಿಗೆ ನಮಸ್ಕರಿಸಿ ಹೊರಡುವ ನಿತ್ಯದವಾಡಿಕೆಯಂತೆ ವಂದಿಸುವ ಸಲುವಾಗಿ ಕುದುರೆಯನ್ನು ಆಳಿನ ಕೈಗೆ ಕೊಟ್ಟು ಮುಂದಡಿಯಿಟ್ಟವನು ಬೆಳಗಿನ ಬೆಳಕಿನಲ್ಲಿ ಕಣ್ಣಿಗೆ ಹಬ್ಬವಾಗಿ ಕಾಣುತ್ತಿದ್ದ ಕೋಟೆ ಗುಡಿ ಗೋಪುರ ಬತೇರಿಗಳನ್ನು ನೋಡಿ ಸಂತೋಷ ಪಡುತ್ತಾ ಸುತ್ತಲೂ ಕಣ್ಣು ಹಾಯಿಸುತ್ತಿರುವಾಗ ಸಮೀಪದ ದೊಡ್ಡ ಬಂಡೆ ಗಲ್ಲಿನ ಮೇಲೆ ಎಳೆ ಬಿಸಿಲಿನಲ್ಲಿ ಒದರಾಗಿ ಬೆಳೆದಿದ್ದ ತನ್ನ ಮಿಂದ ತಲೆಕೂದಲನ್ನು ಕೈ ಬೆರಳುಗಳಿಂದ ಬಿಡಿಸುತ್ತಾ ನವಿಲಿನ ಜಾಗರದಂತೆ ಹರಡಿಕೊಂಡು ತೇವ ಆರಿಸಿಕೊಳ್ಳುತ್ತಿದ್ದ ತರುಣಿಯೊಬ್ಬಳು ಕಣ್ಣಿಗೆ ಬಿದ್ದಳು. ಗರಿಬಿಚ್ಚಿದ ನವಿಲಿನಂತಿದ್ದ ತರುಣಿ ತನ್ನ ಮೇಲೆ ಬಿದ್ದ ಕಣ್ಣುಗಳಿಗೆ ಬೆಚ್ಚಿ ತನ್ನ ಸೆರಗು ಜಾರುವ ಪರಿಯನ್ನು ಲೆಕ್ಕಿಸದೆ ಗಾಬರಿಯಿಂದ ಮೇಲೆದ್ದು ನಿಂತು ಮೈ ಮರೆತು ಹಾಗೇ ಒಮ್ಮೆ ವೈಯ್ಯಾರದಿಂದ ರಾಜಕುಮಾರನನ್ನು ದಿಟ್ಟಿಸಿ, ಸರಸರನೆ ನಡೆದು ಹೊರಟು ಹೋದಳು.

ಉಕ್ಕೇರುವ ಹೊಳೆಯಂತಿದ್ದ ಪ್ರಾಯಮತ್ತ ಹೆಣ್ಣಿನ ಮೈಮಾಟದ ನೋಟ ಅವನ ಕಣ್ಣಿಗೆ ಮೋಡಿ ಮಾಡಿತ್ತು ಆತ ತನಗರಿವಿಲ್ಲದಂತೆ ಓಹ್ ಎಂತಾ ಚೆಲುವು...! ಎಂತಹ ಮೈ ಮಾಟ..ಎಂದು ಪಕ್ಕದಲ್ಲಿದ್ದವರಿಗೂ ಕೇಳುವಷ್ಟು ಗಟ್ಟಿಯಾಗಿಯೇ ಉದ್ಗರಿಸಿ ಬಿಟ್ಟದ್ದನು. ಆ ಮಾತುಗಳು ತರುಣಿಯ ಕಿವಿಗಳಿಗೂ ತಾಗಿರಬೇಕು ಹುಲಿ ವಾಸನೆ ಅರಿತ ಜಿಂಕೆಮರಿಯಂತೆ ತರುಣಿ ಛಂಗನೆ ಹಾರಿ ಮರೆಯಾಗಿ ಬಿಟ್ಟಳು ಎಂಥಹವರ ಚಿತ್ತವೂ ಚಂಚಲವಾಗಬಹುದಾದ ಅತಿ ಸುಂದರ ಚೆಲುವಿತ್ತು. ತರುಣಿಯಲ್ಲಿ, ಚೆಲುವ ರಾಶಿಯು ಮೂಡಿಸಿದ ಅಮಲಿನಲ್ಲಿಯೇ ಪಕ್ಕದಲ್ಲಿದ್ದ ವರನ್ನು ಕುರಿತು, ಯಾರಾಕೆ ? ಯಾವ ಪುಣ್ಯವಂತರು ಪಡೆದ ಮಗಳೋ?

ಕೈ ಹಿಡಿಯುವ ಭಾಗ್ಯವಂತ. ಎಂದು ಲೋಕಾ -ರೂಢಿಯಾಗಿ ನುಡಿದು ಹೊರಳಿ ತನ್ನ ಕೆಲಸದೊಳಗೆ ಅರಿವು ಮೂಡಿಸಿಕೊಂಡು ಗಣೇಶನಿಗೆ ನಮಸ್ಕರಿಸಲು ಕೈಜೋಡಿಸಿ ಕಣ್ಣು ಮುಚ್ಚಿ ಶಿರಭಾಗಿದರೆ ತನ್ನ ಚಿತ್ತ ಏಕಾಗ್ರತೆ ಕಳೆದುಕೊಂಡಿದೆ ಎನಿಸಿತು. ಮುಚ್ಚಿದ ಕಣ್ಣೊಳಗೂ ಅದೇ ಬಿಂಬ ಮರುಕಳಿಸಿತ್ತು. ಎಚ್ಚೆತ್ತ ನಾಯಕ ತನ್ನ ಕಣ್ತೆರೆದು ಶಿರ ವದರಿ ಗಣೇಶನನ್ನು ಕಣ್ಣಿಟ್ಟು ನೋಡುತ್ತಾ ಭಕ್ತಿಯಿಂದ ವಂದಿಸಿದ ಆ ಘಟನೆಯನ್ನು ಅಲ್ಲಿಗೇ ಬಿಡುತ್ತಾ ಅದು ಯಾರ ಮನೆಯ ನಂದಾದೀಪವೋ? ನಮಗೇಕೆ? ಅದರ ಗೊಡವೆ ಎಂದು ಅದನ್ನು ಶಿರದಿಂದ ಕೊಡವಿ ಕೊಂಡು ಗಣೇಶ ಸ್ತುತಿ ಮಾಡುತ್ತಾ ಮೂರು ಬಾರಿ ಗುಡಿಯನ್ನು ಪ್ರದಕ್ಷಣೆ ಮಾಡಿ ಬಂದು ದೇವರ ಮುಂದೆ ನಿಂತು ಭಕ್ತಿಯಿಂದ ಮತ್ತೊಮ್ಮೆ ನಮಸ್ಕರಿಸಿ ಅರಮನೆಗೆ ಮರಳಿದ.

ಆ ಒಂದು ಗಳಿಗೆಯಲ್ಲಿ ಆ ನೋಟ ಸೃಷ್ಟಿಸಿದ ಭಾವ ಮಾತ್ರವೇ ಹೊರತು ಅದು ಅಮಾ ನವೀಯ ಅಮಾನುಷ ನಡತೆಯಲ್ಲಾ, ಅದೊಂದು ನವಿರು ಭಾವನೆಯ ನಡತೆ ಗುಣವೇ ಆಗಿದೆ ಎಂಬುದು ನಾಯಕನ ಮನದಿಂಗಿತವಾಗಿತ್ತು. ನಾಲ್ಕಾರು ದಿನಗಳು ಕಳೆದಿವೆ ಹಜಾರದಲ್ಲಿ ನಾಯಕರು ಒಂಟಿಯಾಗಿ ಕುಳಿತು ತಮ್ಮ ರಾಜಕಾರಣದ ಮುಂದಿನ ನಡೆ ಹೇಗಿರಬೇಕು ಪೇಶ್ವೆ ಗಳೊಂದಿಗೆ ಸ್ನೇಹವೇ ಯುದ್ಧವೇ ಅದರ ನಡೆಯನ್ನು ಹೇಗೆ ರೂಪಿಸಬೇಕೆಂದು ಗಾಢವಾದ ಆಲೋಚನೆಯಲ್ಲಿರುವಾಗ...ಉದ್ವೇಗದ ಬಿರುಗಾಳಿಯನ್ನೇ ಉಂಡವನಂತೆ ದಡ ದಡನೆ ದಾವಿಸಿದವನೇ ಸಹೋದರ ಪರಶುರಾಮನು ಅಣ್ಣಾನಿಮ್ಮ ಅಲೆಮಾರಿ ಕಣ್ಣಿನಿಂದಾಗಿ ಎಂತಹ ಘೋರ ಹತ್ಯೆಯಾಯಿತು – ಬಲ್ಲೆಯಾ. ನಿಮ್ಮ ಕಣ್ಣುಗಳು ಒಂದು ಮೃತ್ಯುವಿಗೆ ಕಾರಣವಾದವು ಎಂಬ ಕಠೋರವಾದ ನುಡಿಗಳಿಗೆ ಬೆಚ್ಚಿದವನೇ ಅದಕ್ಕೆ ಕಡಿವಾಣ ಹಾಕುವಂತೆ ಆರ್ಭಟಿಸುತ್ತಾ ಏನಂದೇ...? ತನ್ನೊಳಗೆ ಸಿಡಿಲು ಮಿಂಚು ಹೊಮ್ಮುತ್ತಿರುವಂತೆ ಬೆಚ್ಚಿ ಕೇಳಿದ್ದರು?

ಹೌದು ಅಣ್ಣ ನಿಮ್ಮ ಕಣ್ಣುಗಳ ಧಾಳಿ, ಕಂಬಳಯ್ಯ ನವರ ಮಗಳ ಪಾಲಿಗೆ ಶಾಪವಾಯಿತು. ಆಕೆಯ ಮೃತ್ಯುವಾಯಿತು ಎಂದು ಸಿಡಿಯುವ ಕೋಪದಲ್ಲಿ ತನ್ನ ಮನಸ್ಸಿನ ಕಹಿಯನ್ನು ಖಾರವಾಗಿಯೂ ಕ್ರೂರ ವಾಗಿಯೂ ಕಹಿಯಾಗಿಯೂ ಪ್ರತಿಕ್ರಿಯಿಸಿದನು. ಕಂಪ್ಳಯ್ಯನವರ ಮಗಳೇ, ಯಾರಾಕೆ? ನನ್ನ ಕಣ್ಣು ಗಳೇನು ಅಪರಾಧ ಮಾಡಿದವು ಆಕೆಗೆ? ಇದೇನು ಹೇಳುತ್ತಿರುವೆ ನೀನು. (ದಿಗ್ಭ್ರಾಂತನಾಗಿ ಕೇಳಿದ) ವಿಷಾದದಿಂದ-ಇಷ್ಟು ಬೇಗ ಮರೆತು ಬಿಟ್ಟಿರಾ ಅಣ್ಣಾ? ಏನು ಹೇಳುತ್ತಿರುವೆ ನೀನು? ಪ್ರಜ್ಞೆ ಇಟ್ಟು ಆರಿತು ಮಾತನಾಡು ಯಾವ ಹೆಣ್ಣು? ಯಾವ ತಳವಾರ? ಆಕೆಗೂ ನಮ್ಮ ಕಣ್ಣಿಗೂ ಏನು ಸಂಬಂಧ? ಒಗಟಾಗಿ ಮಾತನಾಡಬೇಡ ಅದೇನಾ ಯುತೆಂದು ಬಿಡಿಸಿ ಹೇಳು ಅಬ್ಬರಿಸಿದ್ದ. ಅಣ್ಣ ಮೂರು ದಿನಗಳ ಹಿಂದೆ ಉತ್ಸವದ ಸಿದ್ಧತೆಗಳನ್ನು ನೋಡಿ ಬರಲೆಂದು ನಾವು ಹೋಗುತ್ತಿರುವಾಗ ಸಾನಂದ ಗಣಪತಿ ದೇವಾಲಯದ ಹಿಂದಿನ ಬಂಡೆಯ ಮೇಲೆ ತಲೆಗೂದಲು ಒಣಗಿಸುತ್ತಾ ಕುಳಿತಿದ್ದ ತರುಣಿ ನಿಮ್ಮ ನೋಟ ಮತ್ತು ಮಾತು ಕೇಳಿ ಚಿಗರೆಯಂತೆ ಓಡಿ ಹೋಗಿದ್ದ ಹೆಣ್ಣು. ಓಹೋ ಅದೇನು? ಆ ಹೆಣ್ಣೇ? ಏನಾಯಿತು ಆಕೆಗೆ? ಹೌದು ಅದೇ ಹೆಣ್ಣೆ. ಈಗ ಆಕೆ ಇಲ್ಲ ಆ ಹೆಣ್ಣು.....ನಿಮ್ಮ ನೋಟದ ಬಾಣದಿಂದ , ನಿಮ್ಮ ಹಗುರ ನಾಲಿಗೆಯಿಂದ ಹೆಣ್ಣಿನ ಮೃತ್ಯುವಾಯಿತು...ಅಂದರೆ? ಏನರ್ಥ ನಿಮ್ಮ ನೋಟಕ್ಕೆ ರಾಜ್ಯದ ಹೆಣ್ಣುಗಳು ಹೆದರುತ್ತಾರೆ ಎಂದರೆ ನೀವು ನಂಬಲಿಲ್ಲ ಈಗಲಾದರೂ ನಂಬಿ ನಿಮ್ಮ ಕಣ್ಣು ಮೆಚ್ಚಿದ ಹೆಣ್ಣು ಈಗ ರಣಹದ್ದುಗಳಿಗೆ ಬಲಿಯಾಗಿದೆ. ಏನಾಯಿತು ಪರಶುರಾಮಣ್ಣ ಯಾರು ಆ ಚೆಲುವಿನ ಗಣಿಯನ್ನು ಕೊಂದ ಪಾಪಿಗಳು? ನಿಂತ ನಿಲುವಿನಲ್ಲಿ ಅವರನ್ನು ಸೀಳಿ ನಾಯಿಗಳಿಗೆ ಉಣಬಡಿಸುವೆ. ಹಾಗೆ ಮಾಡು ವುದಾದರೆ ನಿಮ್ಮ ನಾಲಿಗೆ ಕಣ್ಣುಗಳು ನಾಯಿ ನರಿಗಳಿಗೆ ಊಟವಾಗಬೇಕು.

ನಿಮ್ಮ ನಾಲಿಗೆ ಕಣ್ಣುಗಳೇ ಆ ನಿರಪರಾಧಿಯ ಕೊಲೆಗೆ ಕಾರಣವಾದದ್ದು ನಿಮ್ಮ ಕಣ್ಣು ಆಕೆಯ ರೂಪ ವನ್ನು ಕಂಡು ಮೆಚ್ಚಿತು ಬಾಯಿಯ ಅದನ್ನು ಹಾಡಿ ಹೊಗಳಿತು. ಸಾಲದೆಂಬುದಕ್ಕೆ ಅಕ್ಕ ಪಕ್ಕದವರು ಕೇಳಿಸಿಕೊಳ್ಳುವಂತೆ. ಆಕೆ ಯಾರ ಮಗಳು ಈ ಚೆಲುವೆ ಎಂದೆಲ್ಲಾ ಕೇಳಿದಿರಿ.

ರೆಕ್ಕೆಪುಕ್ಕ ಹಚ್ಚಿ ಮಾತನಾಡಿದರು. ತಳವಾರ ಕಂಪಳಯ್ಯ ತಮ್ಮ ಮನೆಗಾಗಲಿ ಅರಮನೆಯ ಮರ್ಯಾದೆ ಗಾಗಲಿ ಕಳಂಕ ಬರಬಾರದು. ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ ನಾವು ಬದುಕಿದ್ದು ಸತ್ತಂತೆ ಎಂದು ಹೆದರಿ ಏನೇನೋ ಆಲೋಚನೆ ಮಾಡಿ ಕೊಂಡನೋ? ಏನೋ ದೇವರ ದರ್ಶನ್ ಮಾಡಿ ಬರುವ ನೆಪದಲ್ಲಿ ಹಿಮ ಪರ್ವತಕ್ಕೆ ಕರೆದೊಯ್ದು ಅಲ್ಲಿಯ ಬೈರುವನಿಗೆ ಚೆಲುವೆಯನ್ನು ಬಲಿಕೊಟ್ಟಂತೆ ಕರುಳಿನ ಮಮಕಾರವನ್ನು ಮರೆತು ಕ್ರೂರವಾಗಿ ಬೆಟ್ಟದಿಂದ ತಳ್ಳಿ ಬಂದು ಈಗ ಹಾಡಾಡಿಕೊಂಡು ಅಳುತ್ತಿದ್ದಾರೆ. ಈ ದುರ್ಘಟನೆಗೆ ಇಡೀ ತಳವಾರ ಸಮುದಾಯ ಕಂಪಿಸಿ ಕಣ್ಣೀರಾಗಿದೆ. ಕೋಪದಿಂದ ಕೆರಳಿದ ನಾಯಕರು ಅವರು ನೀಚರು, ಚಂಡಾಲರು, ಕಟುಕರು ಆ ಪಾಪಿಗಳು-ಉದ್ಗರಿಸಿದ್ದರು.

ಯಾರನ್ನು ಕುರಿತು ನೀಚರೆನ್ನುತ್ತಿದ್ದೀರಿ ಮರ್ಯಾದೆಗೆ ಅಂಜಿ ಮಗಳನ್ನು ಕೈಯಾರೆ ಕಡಿದ ತಂದೆಯನ್ನೇ ಕಸ್ತೂರಿ ಪರಿಮಳದಂತಿದ್ದ ಮಗಳನ್ನು ಕಳೆದುಕೊಂಡು ದುಃಖಿದ ಮಡುವಿನಲ್ಲಿ ಒದ್ದಾಡುತ್ತಿರುವ ತಾಯಿಯನ್ನೇ? ಕಣ್ಣೀರಿಡುವ ಬಂಧು ಬಳಗವನ್ನೇ? ಯಾರನ್ನು, ಯಾರನ್ನು ದೂಷಿಸುತ್ತಿದ್ದೀರಿ. ಧೂಷಿಸುವುದಾದರೆ ನಿಮ್ಮ ಕಣ್ಣುಗಳನ್ನು ನಿಮ್ಮ ನಾಲಿಗೆಯನ್ನು ನಿಂದಿಸಿಕೊಳ್ಳಿ ಎಂದು ಉಕ್ಕಿ ಬಂದ ಉದ್ವೇಗದಿಂದ ಕೋಪದಲ್ಲಿ ನುಡಿದಿದ್ದ. ನಿಜ ಅರಿಯದೆ ಬಾಯಿಗೆ ಬಂದಂತೆ ಮಾತನಾಡುವ ನೀನು ನನ್ನ ಕಣ್ಣೆದುರಿನಿಂದ ತೊಲಗಾಚೆ, ತೊತ್ತಿನ ಮಗನೇ ಎಂದು ಸಿಡಿಲಿನಂತೆ ಅಬ್ಬರಿಸಿದ್ದರು. ತಾನಾಡಿದ ವಾರ್ತೆಯನ್ನು ಕೇಳಿ ಪ್ರಳಯ ರಕ್ತ ಬೆಂಕಿಯುಂಡೆ ಯಂತಾದ ಅಣ್ಣನ ಕಣ್ಣುಗಳನ್ನು, ಉರಿಯುಕ್ಕುವ ಮುಖವನ್ನು ಜ್ವಾಲೆ ಯಾದ ತನ್ನ ಅಣ್ಣನ ಮಾತುಗಳನ್ನು ನಿಂತು ನೋಡ ಲಾಗದೆ ಕೇಳಲಾಗದೆ ಅಲ್ಲಿಂದ ಹೊರಟು ಹೋದನು ಸಹೋದರ ಪರಶುರಾಮ.

ತಾಯಿ ಉತ್ತರಾಂಬೆ ಇದೆಂತ ಘೋರ ಕಳಂಕವನ್ನು ನನ್ನ ತಲೆಗೆ ತಂದೆ. ನಾನು ಮಾಡಿದ ಅಪರಾಧ ವಾದರೂ ಏನಿತ್ತು? ಸುಂದರವಾದದ್ದನ್ನು ನೋಡಿ ಮೆಚ್ಚುಗೆಯನ್ನಾಡುವುದೂ ದೋಷವೇ? ಮೆಚ್ಚು ಗೆಯ ಮಾತುಗಳೇಕೆ ಅಮಾನುಷವಾದವು. ಯೌವ್ವ ನವು ಪ್ರಕೃತಿಯು ಮನುಷ್ಯರಿಗೆ ನೀಡಿರುವ ವರವೇ ಅಲ್ಲವೇ, ವಸಂತಕಾಲದ ಇಳೆಯ ಶೋಭೆಯಂತೆ ಇದೂ ಒಂದು ಕಾಲದ ಗುಣವೆಂದೇ ಭಾವಿಸಿದೆನಲ್ಲಾ ಅದರ ವರ್ಣನೆಯೂ ಅಪರಾಧವೇ? ಹೀಗೇಕೆ ಆಯಿತು. ಏಕಿಂತ ಅಪವಾದ ಎಂದು ಕೊಳ್ಳುತ್ತಾ ತನ್ನ ಹಣೆಯನ್ನು ಹತ್ತಾರು ಬಾರಿ ಗೋಡೆಯೇ ಮುರಿದುಬಿಟ್ಟಿತೇನೋ ಎನ್ನುವಂತೆ ಝಳಪಿಸಿಕೊಂಡ ನಾಯಕರು ಹಾಗೇ ಕುಸಿದು ಬಿದ್ದು ಬಿಟ್ಟರು. ಆಕಾಶವನ್ನು ಎತ್ತಿ ಒಗೆದಂತೆ ನೆತ್ತರು ಎದುರು ಗೋಡೆ ಯಲ್ಲೆಲ್ಲಾ ಚಿಮ್ಮಿ ಹರಿದಿತ್ತು. ಎರಡು ಮೂರು ದಿನಗ ಳಾಗಿತ್ತು ಕುಳಿತಡೆಯಿಂದ ಕದಲಿಲ್ಲಾ ಊಟವಿಲ್ಲ ಮಾತಿಲ್ಲ ಕಥೆ ಇಲ್ಲ ಬಂಡೆಯಂತಾಗಿದ್ದ, ಮನಸ್ಸು ಚಿಂತೆಯಲ್ಲಿ ಬೆಂದು ಹೋಗಿತ್ತು. ಮರಿ ಕಳೆದುಕೊಂಡ ಸಿಂಹ ದಂತೆ ಮನಸ್ಸು ವಿಲವಿಲನೆ ಹೊಯ್ದಾಡುತ್ತಿದ್ದರೆ, ನೀರು ಕಳೆದುಕೊಂಡು ಪಾತಾಳ ಕ್ಕಿಳಿದ ಬಾವಿ ಯಂತೆ ಬಾಡಿದ ಕಣ್ಣುಗಳು, ಕಚ್ಚಿ ಕಚ್ಚಿ ರಕ್ತದ ಕರೆ ಕಟ್ಟಿದ್ದ ತುಟಿಗಳು, ಕಣ್ಣೀರಿನಿಂದ ಕೆನ್ನೆಗಳ ಮೇಲೆ ಬರೆಗಳು ಮೂಡಿದ್ದವು. ದುಃಖದಲ್ಲಿ ಬೆಂದು ಬೂದಿಯಂತಾಗಿದ್ದರು. ನೊಂದ ಮನಸ್ಸಿ ನೊಡನೆ ಮಾತನಾಡಲು ತಾಯಿಗೂ ಅಂಜಿಕೆಯಾಗಿತ್ತು.

ನಾಲ್ಕನೇ ದಿನ ಏನೋ ಸಾಧಿಸಿ, ನಿರ್ಧರಿಸಿದಂತೆ ಎದ್ದವನೇ ದೂರದಲ್ಲಿದ್ದ ಆಳನ್ನು ಕೂಗಿ ಕರೆದು ಹೋಗಿ ಅಂದು ನಾನು ಪಟ್ಟಕ್ಕಾಗಿ ಧರಿಸಿದ್ದ ಬಟ್ಟೆ ಬರೆ ವಸ್ತ್ರಾಭರಣಗಳನ್ನು ತನ್ನಿರಿ, ತಪ್ಪಿದರೆ ತೊಗಲು ಸುಲಿದೇನು ಎಂದು ಅಬ್ಬರಿಸಿದ್ದ ಓಡಿ ಹೋದ ಊಳಿ ಗದವರು ಹೇಳಿದ ಮಾಹಿತಿ ನಾಯಕರ ಆಜ್ಞೆಯ ಮಾತುಗಳು ಅಧಿಕಾರಿಗಳನ್ನು ಬೆಚ್ಚಿಬೀಳಿಸಿದ್ದವು. ಬೀಗ ಮುದ್ರೆ ಯಾಗಿ ಇರಿಸಿದ್ದ ಆಭರಣಗಳನ್ನು ವಸ್ತ್ರ ಗಳನ್ನು ಬೆಳ್ಳಿಯ ಹರಿವಾಣದಲ್ಲಿ ಹೊರಿಸಿಕೊಂಡು ಬರುವ ವಿಚಾರ ಮಿಂಚಿನಂತೆ ಎಲ್ಲಾ ಕಡೆಗೂ ಹಬ್ಬಿ ತಾಯಿ ನಿಂಗವ್ವನ ಕಿವಿಗೂ ಬಿದ್ದಿತ್ತು. ಆತು ರಾತು ರವಾಗಿ ಇದೇನು ಆಗಿ ಹೋಯಿತು ಎಂದುಕೊಂಡು ಬಂದು ನೋಡಲು ಭಟರು ರಾಜ ಪೋಷಾಕು ಉಡಿಸುವಾಗ ನಿರ್ಜೀವ ಶಿಲಾ ಪ್ರತಿಮೆಯಂತೆ, ಬೋಳು ಮರಕ್ಕೆ ಸಿಂಗರಿಸಿದ ಕೃತಕ ಎಲೆಗಳಂತೆ, ನಿಸ್ತೇಜವಾದ ಕಳೆಬರದಂತೆ ಕಳಾಹೀನವಾದದ್ದನ್ನು ಕಂಡು ತಾಯಿ ನೀಲವ್ವ . ಇದೇನಾಯಿತು ನಿನಗೆ ಹೀಗೇಕೆ ಎಂದು ಕೇಳಲು ಹೊರಟ ತಾಯಿಯನ್ನು ತಡೆದು ನೀವಿತ್ತ ಬರಬೇಡಿ, ನಾನು ಮಾಡಿದ ಪಾಪ ಕಳೆದುಕೊಳುವವರೆಗೂ ನನ್ನ ಈ ಹೀನ ಮುಖ ನೋಡಲು ಬರಬೇಡಿ. ಈಗ ನಾನಾರಿಗೂ ಮಗನು ಅಲ್ಲ ಸಹೋದರನೂ ಅಲ್ಲ ಎಂದು ನಿರ್ಜೀವ ಭಾವನೆ ಯಿಂದ ನುಡಿದ.

ಏನು ವಿಷಯ ? ಎಲ್ಲಿಗೆ ಹೋಗುತ್ತಿದ್ದೀಯಾ ?

ಬಲಿತಿಂದ ನಾನು ಬದುಕುಳಿಯಲು ಸಾಧ್ಯವೇ ಎಂದು ಕೇಳುವ ಸ್ಥಳಕ್ಕೆ. ಅಂದರೆ ಅವ್ವಾ ಈಗ ಆ ಮಾತು ಬೇಡ ಬದುಕಿ ಬಂದರೆ ಹೇಳುತ್ತೇನೆ ಅವನನ್ನು ಕಾಡುತ್ತಿರುವ ನೋವೆಂದು ನಿಂಗ ವನಿಗೆ ತಿಳಿದು ಹೋಗಿತ್ತು. ನಿಂಗವ್ವ ಸಾಂತ್ವನಿಸುವ ಧ್ವನಿಯಲ್ಲಿ ಅದಕ್ಕೆ ಈ ವೇಷಭೂಷಣಗಳೇಕೆ-

ಈ ವೇಷ ಭೂಷಣಗಳು ತಾನೆ ಆ ಚೆಲುವಿನ ಬದುಕಿಗೆ ಚೂರಿಯಾಗಿ, ಕಂಟಕವಾಗಿದ್ದು ಅದಕ್ಕೆ ನನ್ನನೀಗ ತಡೆಯಬೇಡಿ ಬಂದು ಮಾತನಾಡುವ ನಿರ್ಧಾರವಾಣಿಯಲ್ಲಿ ನುಡಿದಿದ್ದ ಅಣ್ಣಾ! ಇದೇನು ಮಾಡುತ್ತಿರುವಿರಿ,? ಪರಶುರಾಮ ಕೇಳಿದ್ದ ನಾನೀಗ ಯಾರ ಅಣ್ಣನು ಅಲ್ಲ ಯಾರ ತಮ್ಮನೂ ಅಲ್ಲಾ ನನ್ನ ತಡೆಯಲು ಬೇಡಿರಿ ಹೊರಟೆ ಎಲ್ಲಿಗೆ? ಏನು ಎತ್ತ ಎಂದು ಹೇಳದೇ ಹೊರಟರೆ ನನ್ನ ಹೆಣ ದಾಟಿಕೊಂಡು ಹೋಗಬೇಕು ಅಡ್ಡ ಮಲಗಿದ್ದಲು ನಿಂಗವ್ವ ತಾಯಿಯ ಸ್ಥಿತಿ ಕರುಳು ಕತ್ತರಿಸಿ ಕಣ್ಣಿಂದ ರಕ್ತ ಚಿಮ್ಮಿದಂತಾಯಿತು ಅಯ್ಯೋ! ನೀವೇ ನನ್ನ ದಾರಿಗೆ ಅಡ್ಡವಾದರೆ ಹೇಗೆ ಅವ್ವಾ ? ಮೇಲೇಳಿ ಲೋಕಕ್ಕೆ ತಿಳಿಯಬೇಕಾದ್ದು ಮೊದಲು ನಿಮಗೇ ತಿಳಿದು ಬಿಡಲಿ. ನೋಟದಿಂದಲೇ ಸುತ್ತಲಿನ ಪರಿವಾರವನ್ನು ಚದುರಿಸಿದ್ದ

ಭಾರತ ವಿರೋಧಿ ಹೇಳಿಕೆ ಮುಂದುವರಿಸಿದ ಅಮೇರಿಕಾ

• ಪ್ರಜೋದಯ ವರದಿ

ವಾಷಿಂಗ್ಟನ್: ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಪ್ತ, ಯುಎಸ್ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಅವರು ಭಾರತ ಮತ್ತು ಬ್ರೇಜಿಲ್ ದೇಶಗಳನ್ನು ಸರಿ ಪಡಿಸ ಬೇಕಾಗಿದೆ ಎನ್ನುವ ಮೂಲಕ ಮತ್ತೊಮ್ಮೆ ಭಾರತದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಲುಟ್ನಿಕ್ ಅವರ ಈ ಹೇಳಿಕೆಯು ಇತ್ತೀಚಿನ ಭಾರತ ವಿರೋಧಿ ಹೇಳಿಕೆಗಳ ಸರಣಿಯನ್ನು ಮುಂದುವರೆಸಿದೆ. ಕಳೆದ ಕೆಲವು ವಾರಗಳಲ್ಲಿ ರಷ್ಯಾದ ತೈಲ ಖರೀದಿ ಮತ್ತು ವ್ಯಾಪಾರದ ವಿಷಯದ ಕುರಿತು ಲುಟ್ನಿಕ್ ನಿರಂತರ ವಾಗಿ ಭಾರತದ ವಿರುದ್ಧ ಕಠಿಣ ಭಾಷೆ ಬಳಸಿದ್ದಾರೆ. ಸಂದರ್ಶನವೊಂದರಲ್ಲಿ ಹೊವಾರ್ಡ್ ಲುಟ್ನಿಕ್ ಅವರನ್ನು ಭಾರತ, ಸ್ವಿಟ್ಜರ್ಲೆಂಡ್ ಮತ್ತು ಬ್ರೆಜಿಲ್ ನೊಂದಿಗೆ ಯುಎಸ್ ನಡೆಯುತ್ತಿರುವ ವ್ಯಾಪಾರ ಮಾತುಕತೆಗಳ ಬಗ್ಗೆ ಪ್ರಶ್ನಿಸ ಲಾಯಿತು. ಅದಕ್ಕೆ ಖಾರವಾಗಿ ಪ್ರತಿ ಕ್ರಿಯಿಸಿದ ಲುಟ್ನಿಕ್, ನಾವು ಸರಿಪಡಿಸ ಬೇಕಾದ ಕೆಲವು ದೇಶಗಳಿವೆ. ಭಾರತ ಮತ್ತು ಬ್ರೆಜಿಲ್ ಸರಿಪಡಿಸಬೇಕಾದ ಅಂತಹ ದೇಶಗಳು. ಈ ದೇಶಗಳು ಯುಎಸ್ ಜೊತೆ ಎಚ್ಚರಿಕೆಯಿಂದ ಪ್ರತಿಕ್ರಿಯಿಸಬೇಕಾಗುತ್ತದೆ. ತಮ್ಮ ಮಾರುಕಟ್ಟೆಗಳನ್ನು ನಮಗೆ ತೆರೆಯ ಬೇಕು ಮತ್ತು ಯುಎಸ್‌ಗೆ ಹಾನಿ ಮಾಡುವ ಕ್ರಮ ತೆಗೆದುಕೊಳ್ಳುವು ದನ್ನು ನಿಲ್ಲಿಸಬೇಕಾಗುತ್ತದೆಂ ದರು.

ಕಳೆದ ತಿಂಗಳು, ಟ್ರಂಪ್ ಆಡಳಿತವು ಭಾರತೀಯ ಸರಕುಗಳ ಮೇಲೆ ಶೇ.50 ರಷ್ಟು ಸುಂಕ ವಿಧಿಸಿತ್ತು. ಇದು ಭಾರತ ಮತ್ತು ಯುಎಸ್ ನಡುವಿನ ಸಂಬಂಧ ವನ್ನು ಹದಗೆಡಿಸಿದೆ. ಭಾರತವು ಅಮೇ ರಿಕಾದ ಗ್ರಾಹಕರಿಗೆ ಮಾರಾಟ ಮಾಡಲು ಬಯಸಿದರೆ, ಅದು ಅಮೇ ರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಸಮನ್ವಯ ಸಾಧಿಸ ಬೇಕೆಂಬುದನ್ನು ಅರ್ಥ ಮಾಡಿಕೊಳ್ಳ ಬೇಕೆಂದು ಲುಟ್ನಿಕ್ ಹೇಳಿದರು.

ಅನೇಕ ದೇಶಗಳ ಜೊತೆಗಿನ ವ್ಯಾಪಾರ ಮಾತುಕತೆಗಳು ಮುಗಿ ದಿದ್ದು ನಮಗೆ ಮುಕ್ತ ಅವಕಾಶ ಸಿಕ್ಕಿದೆ. ಆದರೆ ಇನ್ನು ಕೆಲವು ದೇಶಗಳು ಉಳಿ ದಿವೆ. ಭಾರತ ಮತ್ತು ಬ್ರೆಜಿಲ್‌ನಂತಹ ಕಡಿಮೆ ಮಹತ್ವದ್ದಾಗಿವೆ. ಇವುಗಳು ಕಾಲಾನಂತರದಲ್ಲಿ ಪರಿಹರಿಸಲ್ಪಡುತ್ತ ವೆಂದು ನಾವು ಭಾವಿ ಸುತ್ತೇವೆಂದು ಲುಟ್ನಿಕ್ ಹೇಳಿದರು. ವಿಳಂಬಕ್ಕೆ ದೆಹಲಿ ಯನ್ನು ದೂಷಿಸಿದ ಲುಟ್ನಿಕ್, ಭಾರತ ದೊಂದಿಗಿನ ವ್ಯಾಪಾರ ಮಾತುಕತೆಗಳ ಸ್ಥಿತಿಯನ್ನು ಬಹಿರಂಗಪಡಿಸಲಿಲ್ಲ.

ಯುಎಸ್ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಇತ್ತೀಚಿನ ದಿನ ಗಳಲ್ಲಿ ನಿರಂತರ ವಾಗಿ ಹುಚ್ಚನಂತೆ ವರ್ತಿಸುತ್ತಿದ್ದಾರೆ. ರಷ್ಯಾದಿಂದ ತೈಲ ಖರೀದಿಸಿದ್ದಕ್ಕಾಗಿ ಲುಟ್ನಿಕ್ ಭಾರತ ವನ್ನು ವಿಶೇಷವಾಗಿ ಟೀಕಿಸಿದ್ದಾರೆ. ಇತ್ತೀಚೆಗೆ ಭಾರತ ಮತ್ತು ಯುಎಸ್ ನಡುವೆ ವ್ಯಾಪಾರ ಒಪ್ಪಂದ ವನ್ನು ತಲುಪಬಹುದು ಮತ್ತು ಭಾರತ ಅದ ಕ್ಕಾಗಿ ಅಮೇರಿಕಾಗೆ ಕ್ಷಮೆಯಾಚಿಸ ಬಹುದೆಂದು ಹೇಳಿದರು.

ಭಾರತವನ್ನು ಧರ್ಮ ಒಗ್ಗೂಡಿಸಿದೆ : ಉಪರಾಷ್ಟ್ರಪತಿ

• ಪ್ರಜೋದಯ ವರದಿ

ಪಾಟ್ನಾ: ವಿವಿಧ ಭಾಷೆಗಳಲ್ಲಿ ಜನರು ಮಾತ ನಾಡುತ್ತಿದ್ದರೂ ಧರ್ಮವು ದೇಶ ವನ್ನು ಒಗ್ಗೂಡಿಸಿದೆ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಹೇಳಿದರು.

ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗ ದೊಂದಿಗೆ ಸಾಹಿತ್ಯ ಅಕಾಡೆಮಿಯು ಭಾನುವಾರ ಆಯೋಜಿಸಿದ್ದ ಉನ್ನೇಶಾ ಅಂತರರಾಷ್ಟ್ರೀಯ ಸಾಹಿತ್ಯ ಉತ್ಸವದಲ್ಲಿ ಮಾತನಾಡಿದ ಅವರು, ಇಡೀ ದೇಶಕ್ಕೆ ಅನ್ವಯವಾಗುವ ಸಾಮಾನ್ಯ ಭಾಷೆಯಿಲ್ಲದಿದ್ದರೂ ಭಾರತ ಹೇಗೆ ಒಗ್ಗಟ್ಟಿನಿಂದ ಇದೆ ಎಂದು ಯುರೋಪ್‌ನ ಗಣ್ಯರೊಬ್ಬರು ಪ್ರಶ್ನಿಸಿದ್ದರು. ಅದಕ್ಕೆ ಉತ್ತರಿಸಿದ್ದ ನಾನು, ದೇಶದ ಜನರು ವಿವಿಧ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಧರ್ಮದ ಪರಿಕಲ್ಪನೆಯಲ್ಲಿ ಇಡೀ ದೇಶದ ಜನರು ಒಂದಾಗಿದ್ದಾರೆಂದು ತಿಳಿಸಿದ್ದೇನು ಎಂದರು.

ಪ್ರಜಾಪ್ರಭುತ್ವ ಎಂಬುದು ಪಾಶ್ಚಿಮಾತ್ಯರ ಪರಿಕಲ್ಪನೆ ಎಂಬ ಅಭಿಪ್ರಾಯವನ್ನು ನಿರಾಕರಿಸಿದ ಅವರು, 2,500 ವರ್ಷಗಳ ಹಿಂದೆಯೇ ಬಿಹಾರದ ನೆಲದಲ್ಲಿ ಜನ್ಮತಾಳಿದ ಮೌರ್ಯ ಸಾಮ್ರಾಜ್ಯವು ಅತ್ಯಂತ ಪ್ರಾಚೀನ ಪ್ರಜಾಪ್ರಭುತ್ವವಾಗಿದೆ ಎಂದು ಪ್ರತಿಪಾದಿಸಿದರು.

ಇಂಡಿಯಾನಾ ಆಸ್ಪತ್ರೆಯಿಂದ ವಾಕಥಾನ್

• ಪ್ರಜೋದ್ಯ ವರದಿ

ಹಾಸನ: ನಗರದ ಇಂಡಿಯಾನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್ ವತಿ ಯಿಂದ ವಿಶ್ವ ಹೃದಯ ದಿನ ಅಂಗವಾಗಿ ಭಾನುವಾರ ನಗರದ ಡೇರಿ ವೃತ್ತದಿಂದ 3 ಕಿ.ಮೀ. ವಾಕಥಾನ್ ಹಮ್ಮಿ ಕೊಳ್ಳಲಾಗಿತ್ತು.

ಇಂಡಿಯಾನಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹೃದ್ರೋಗ ತಜ್ಞ ಡಾ|| ಎಂ.ಅನೂಪ್ ಅವರು ಮಾತ ನಾಡಿ, ಅನಿಯಂತ್ರಿತ ಜೀವನ ಶೈಲಿ, ವ್ಯಾಯಾಮದ ಕೊರತೆ, ಅತಿಯಾದ ಒತ್ತಡ, ಧೂಮಪಾನ, ಮದ್ಯ ಪಾನ ಮತ್ತು ಅಸಮರ್ಪಕ ಆಹಾರ ಪದ್ಧತಿ ಹೃದಯ ರೋಗದ ಪ್ರಮುಖ ಕಾರಣಗಳು. ಜನರಿಗೆ ವಿಶೇಷ ವಾಗಿ ಯುವ ಪೀಳಿಗೆಗೆ ಜಾಗೃತಿ ಮೂಡಿಸು ವುದು ನಮ್ಮ ಕರ್ತವ್ಯವೆಂದರು. ಹೃದಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಹೃದಯದ ನಾಡಿ ಯನ್ನು ನೀವು ಅರಿತುಕೊಳ್ಳಿ ಈ ಘೋಷವಾಕ್ಯ ದೊಂದಿಗೆ ಹೃದಯ ಆರೋಗ್ಯದ ಮಹತ್ವವನ್ನು ಸಾರುವ ಉದ್ದೇಶವಾಗಿದೆ ಎಂದು ಹೇಳಿದರು.

ಡೇರಿ ವೃತ್ತದಿಂದ ರಿಂಗ್ ರೋಡ್, ಸಾಲಗಾಮೆ ವೃತ್ತದ ವರೆಗೆ ಮ್ಯಾರಥಾನ್ ಮತ್ತು ವಾಕಥಾನ್ ಹಮ್ಮಿಕೊಳ್ಳಲಾಗಿತ್ತು. ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ.ಗಂಗಾಧರ್, ಟೈಮ್ಸ್ ಗುರು ಕುಲ ಕಾರ್ಯದರ್ಶಿ ಸುರೇಂದ್ರ, ರೋಟರಿ ಸುಧಾಕರ್, ಸಮೃದ್ಧಿ ಬ್ಯಾಂಕ್‌ನ ಪಾರ್ಶ್ವನಾಥ್, ಕರಾವಳಿ ಸುರೇಂದ್ರ, ಐಎಂಎ ಅಧ್ಯಕ್ಷ ಡಾ.ಡಾಂಗೆ, ಶ್ರೀರಂಗ, ವಿವೇಕ್, ಇಂಡಿಯಾನ ಆಸ್ಪತ್ರೆ ಹೃದ್ರೋಗ ತಜ್ಞ ಡಾ|| ಎಸ್.ಬಿ.ನಿರೂಪ್, ಆಸ್ಪತ್ರೆ ಆಡಳಿತಾಧಿಕಾರಿ ಪ್ರದೀಪ್ ಇತರರಿದ್ದರು.

ಅರಸೀಕೆರೆ: ಸುಬ್ರಹ್ಮಣ್ಯ ನಗರ ಬಡಾವಣೆಯ ಚರ್ಚ್‌ನಲ್ಲಿ ಶನಿವಾರ ರಾತ್ರಿ ಮರಿಯಾ ಮಾತೆ ಅವರ 148ನೇ ವರ್ಷದ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ರಾಷ್ಟ್ರೀಯ ಹೆದ್ದಾರಿ, ಹಾಸನ ರಸ್ತೆ ಹಾಗು ರೈಲ್ವೆ ನಿಲ್ದಾಣ ಮಾರ್ಗವಾಗಿ ಸಾಗಿತು. ಧರ್ಮಗುರುಗಳಾದ ಡೇವಿಡ್ ಅಂತೋಣಪ್ಪ, ಸತೀಶ್, ರೈಲ್ವೆ ಆಲ್ಬರ್ಟ್, ಮಂಗಳನಾಥನ್, ರಾಯಪ್ಪ, ಲಾರೆನ್ಸ್, ಅಮೃತನಾಥನ್, ಸುರೇಶ್ ಥಾಮಸ್, ಟೋನಿಜೇಮ್ಸ್, ಬಾಲರಾಜ್, ಅರುಣ್, ವಿಕ್ಕಿ, ಪ್ರತಾಪ್ ಇತರರಿದ್ದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಭಗತ್ ಸಿಂಗ್ ಜನ್ಮ ದಿನಾಚರಣೆ

• ಪ್ರಜೋದಯ ವರದಿ

ಹಾಸನ: ಆಲ್ ಇಂಡಿಯಾ ಡೆಮಾಕ್ರ ಟಿಕ್ ಸ್ಟುಡೆಂಟ್ ಸಂಸ್ಥೆ (ಎಐಡಿಎಸ್‌ಒ) ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗ ಣದಲ್ಲಿ ಭಾನುವಾರ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಜನ್ಮ ದಿನ ಆಚರಿಸಲಾಯಿತು.

ಎಐಡಿಎಸ್‌ಒ ಜಿಲ್ಲಾ ಸಂಚಾಲಕಿ ಚೈತ್ರ ಅವರು ಮಾತನಾಡಿ, ಕೇವಲ ಸ್ವಾತಂತ್ರ್ಯ ಪಡೆ ಯುವುದು ನಮ್ಮ ಉದ್ದೇಶವಲ್ಲ. ಬ್ರಿಟೀಷರಿಂದ ಪಡೆದ ಸ್ವಾತಂತ್ರ್ಯ ದೇಶದ ಕೆಲವು ಶ್ರೀಮಂತ ವರ್ಗಕ್ಕೆ ವರ್ಗಾವಣೆಯಾದರೆ, ಅದು ನಿಜವಾದ ಸ್ವಾತಂತ್ರ್ಯವಾದೀತೆಯೆಂದು ಭಗತ್ ಸಿಂಗ್ ಪ್ರಶ್ನಿಸಿದ್ದರು. ಭಗತ್ ಸಿಂಗ್ ಮಾನವ ಜೀವನವನ್ನು ಪ್ರೀತಿಸಿ ದರು ಮತ್ತು ಘನತೆ ಎತ್ತಿ ಹಿಡಿದರು. ಇಂದಿಗೂ ದಿನನಿತ್ಯ ಮಾನವರ ಘನ ತೆಯ ಹರಣವಾಗುತ್ತಿದೆ. ಹೆಣ್ಣು ಮ ಕ್ಕಳ ಮೇಲೆ ಅವ್ಯಾಹತವಾಗಿ ದೌರ್ಜನ್ಯ ನಡೆಯುತ್ತಿದೆ. ಹಸಿವು, ಬಡತನ, ನಿರುದ್ಯೋಗ ಮುಂತಾದ ಸಮಸ್ಯೆ ಗಳು ಸಮಾಜದಲ್ಲಿ ತಾಂಡವವಾ ಡುತ್ತಿದೆ. ಬೆರಳೆಣಿಕೆಯ ಕಾರ್ಪೊರೇಟ್ ಮನೆತನಗಳ ಹಿಡಿತದಲ್ಲಿರುವ ದೇಶದ ಬಂಡವಾಳಶಾಹಿ ವ್ಯವಸ್ಥೆಯು ಅವಿ ಶ್ರಾಂತವಾಗಿ ದುಡಿಯುವ ರೈತ ಕಾರ್ಮಿಕರು ಹಾಗು ಜನಸಾಮಾನ್ಯರ ಬದುಕನ್ನು ಅಸಹನೀಯಗೊಳಿಸಿದೆ ಯೆಂದರು.

ಕ್ರಾಂತಿಯೆಂದರೆ ಪ್ರಸಕ್ತ ಸಾಮಾ ಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತೊಗೆದು ಸಮಾಜ ವಾದಿ ವ್ಯವಸ್ಥೆಯ ಸ್ಥಾಪನೆ. ಕೋಮುವಾದವು ಜನಗಳ ಆರ್ಥಿಕ ಪರಿಸ್ಥಿತಿಯೊಂದಿಗೆ ಸಂಬಂಧ ಹೊಂದಿದೆ ಎಂಬುದನ್ನು ಭಗತ್ ಸಿಂಗ್ ಗಮನಿಸಿದರು. ಧರ್ಮವನ್ನು ರಾಜಕೀ ಯದಿಂದ ಹೊರಗಿಡಬೇಕೆಂದು ಅವರು ಪ್ರತಿಪಾದಿಸಿದ್ದರೆಂದರು.

ಶಿಕ್ಷಣದ ವ್ಯಾಪಾರೀಕರಣ, ನಿರು ದ್ಯೋಗ, ಹಸಿವು, ಬಡತನ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಮುಂತಾದ ಸಮಸ್ಯೆಗಳನ್ನು ತಡೆ ಯಲು ಹಾಗು ಶಿಕ್ಷಣ-ಮಾನವತೆ-ಸಂಸ್ಕೃತಿ ಉಳಿಸಲು, ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಭಗತ್ ಸಿಂಗ್ ಅವರ ವಿಚಾರಗಳಿಂದ ಸ್ಫೂರ್ತಿ ಪಡೆದು ಸಾರ್ವಜನಿಕ ಶಿಕ್ಷಣವನ್ನು ಉಳಿಸಲು ಮುಂದೆ ಬನ್ನಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಒ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ, ಕಾರ್ಯಕರ್ತರಾದ ಮಮತಾ, ಪುರುಷೋತ್ತಮ್, ತಿಲಕ್, ನಂದಶ್ರೀ, ಪಲ್ಲವಿ, ಅನನ್ಯ ಹಾಗು ಇತರರಿದ್ದರು.

ಗ್ರಾಮೀಣಾಭಿವೃದ್ಧಿಗಾಗಿ ಯುವ ಜನರನ್ನು ಒಗ್ಗೂಡಿಸಿ

• ಪ್ರಜೋದಯ ವರದಿ

ಬೆಂಗಳೂರು: ಜನರ ಸೇವೆಗಾಗಿ ಶ್ರಮಿ ಸುವ ಯುವ ಜನಾಂಗ ಗ್ರಾಮಗಳ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ವಿಶ್ವ ಗ್ರಾಮೋದಯ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ದಾಸಣ್ಣ ಪಾವಗಡ ಅವರು ಹೇಳಿದರು.

ಬೆಂಗಳೂರಿನ ಕೇಂದ್ರ ಕಚೇರಿ ಯಲ್ಲಿ ಇತ್ತೀಚೆಗೆ ನಡೆದ ವಿಶ್ವ ಗ್ರಾಮೋದಯ ಟ್ರಸ್ಟ್ ಪೂರ್ವ ಭಾವಿ ಸಭೆಯಲ್ಲಿ ಮಾತ ನಾಡಿ, ಕಳೆದ 18 ವರ್ಷಗಳಿಂದ ಗ್ರಾಮೀಣಾಭಿವೃದ್ಧಿ ಯಲ್ಲಿ ಮುಖ್ಯ ವಾಗಿ ಯುವ ಜನರನ್ನು ಒಗ್ಗೂಡಿಸಿ ಅನೇಕ ಕಾರ್ಯ ಕ್ರಮಗಳನ್ನು ರೂಪಿಸ ಲಾಗುತ್ತಿದೆ. ಅನೇಕ ಗ್ರಾಮೀಣ ಪ್ರದೇಶ ಜನರಿಗೆ ಜನಪರ ಕಾರ್ಯ ಕ್ರಮ ಹಮ್ಮಿಕೊಳ್ಳ ಲಾಗಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಜನರಿಗೆ ನಮ್ಮ ಸೇವೆ ತಲುಪಿಸಬೇಕಿದೆ ಎಂದರು.

ಯುವ ನಾಯಕ ಲಯನ್ ಶ್ರೀಧರ್ ಅವರು ಮಾತನಾಡಿ, ಟ್ರಸ್ಟ್ ನ ಕಾರ್ಯಕ್ರಮಗಳನ್ನು ಪ್ರತಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ತಲುಪಿಸಬೇಕು. ಯುವ ಜನರನ್ನು ಸಮಾಜ ಸೇವೆಗೆ ತೊಡಗಿಸಿಕೊಂಡು ಭವಿಷ್ಯದಲ್ಲಿ ಉನ್ನತ ಮಟ್ಟದಲ್ಲಿ ಶಕ್ತಿ ತುಂಬುವ ಕೆಲಸ ಮಾಡಬೇಕೆಂದರು.

ಯುವ ಮುಖಂಡ ಸಂಗಮೇಶ್ ಅವರು ಮಾತನಾಡಿ, ಟ್ರಸ್ಟ್‌ನ ಅಭಿ ವೃದ್ಧಿಗಾಗಿ ಗ್ರಾಮೀಣ ಪ್ರದೇಶದ ಜನರಿಗೆ ಸೂಕ್ತ ಅವಕಾಶ ಕಲ್ಪಿಸಬೇಕು. ಸರ್ಕಾರದಿಂದ ಸಿಗುವ ಸೌಲಭ್ಯಗಳು ಬಡವರಿಗೆ ತಲುಪಬೇಕೆಂದು ಹೇಳಿ ದರು. ವಿಶ್ವ ಗ್ರಾಮೋದಯ ಟ್ರಸ್ಟ್ ಅಧ್ಯಕ್ಷ ಮಹೇಶ್, ಯುವ ಬ್ರಿಗೇಡ್‌ನ ಮುನಿಕುಮಾರ್, ಆನಂದ್ ಸಿ. ತಿರು ಮಲ, ಸಂಗಮೇಶ್, ಗುರುಮೂರ್ತಿ, ರಂಗನಾಥ್ ಪತ್ರೊಟಿ ಇತರರಿದ್ದರು.

ಅ.3ರಂದು ಬ್ಯಾರಿ ಭಾಷಾ ದಿನಾಚರಣೆ

ಸಕಲೇಶಪುರ: ಬ್ಯಾರಿ ಭಾಷೆಗೆ ಮಾನ್ಯತೆ ನೀಡಿ, ರಾಜ್ಯ ಸರ್ಕಾರವು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಯನ್ನು ಸ್ಥಾಪಿಸಿದ ದಿನವಾದ ಅ.3 ರಂದು ಬ್ಯಾರಿ ಭಾಷಾ ದಿನವನ್ನು ಅದ್ದೂರಿಯಾಗಿ ಆಚರಿಸಲಾಗುವು ದೆಂದು ಅಕಾಡೆಮಿ ಅಧ್ಯಕ್ಷ ಯು. ಎಚ್.ಉಮರ್ ಅವರು ತಿಳಿಸಿದರು.

ಪಟ್ಟಣದ ಆಕ್ಸ್‌ಫರ್ಡ್ ಶಾಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಭಾಷೆ ಎಂದರೆ ಸಂಸ್ಕೃತಿ. ಭಾಷೆಯ ಬಗ್ಗೆ ಅಭಿಮಾನ ಇರ ಬೇಕು. ಮನೆಯಲ್ಲಿ ಹೊರಗೆ ನೀವು ಯಾವುದೇ ಭಾಷೆಯನ್ನು ಬಳಸಿ ದರೂ ಮನೆಯಲ್ಲಿ ಮಾತ್ರ ಬ್ಯಾರಿ ಭಾಷೆಯನ್ನೇ ಮಾತ ನಾಡಬೇಕು. ಭಾಷೆ ಉಳಿಯಬೇಕಾದರೆ ಅದರ ಬಳಕೆ ಅವಶ್ಯಕ. ಬ್ಯಾರಿ ಭಾಷಿ ಕರು ರಾಜ್ಯ ಹಾಗೂ ಅಂತರ ರಾಜ್ಯ ಮಟ್ಟದಲ್ಲಿ ಬದುಕನ್ನು ಕಟ್ಟಿಕೊಂಡಿದ್ದು, ಎಲ್ಲರೂ ಒಂದಾಗ ಬೇಕು. ಏಕತೆ ಇದ್ದಾಗ ಮಾತ್ರ ನಮ್ಮ ಏಳಿಗೆ ಸಾಧ್ಯ, ಇಲ್ಲದಿದ್ದರೆ ಸಮಸ್ಯೆಗ ಳನ್ನು ಎದುರಿ ಸಬೇಕಾಗುತ್ತದೆಂದು ಹೇಳಿದರು.

ಹಿಜಾಬ್ ಸಮಸ್ಯೆಯ ಸಂದರ್ಭ ದಲ್ಲಿ ಬ್ಯಾರಿ ಸಮುದಾಯವು ಒಂದಾಗಿ ಎದುರಿ ಸಿದ ಉದಾಹರ ಣೆಯನ್ನು ಸ್ಮರಿಸಿದ ಅವರು, ಸಮು ದಾಯ ಬೆಳೆಯುವುದಕ್ಕೆ ಮೊದಲು ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ನಂತರ ಆರೋಗ್ಯದ ಕಡೆ ಗಮನ ನೀಡಬೇಕು. ಬಳಿಕ ಉತ್ತಮ ಸಂಬಂಧಗಳನ್ನು ರೂಢಿಸಿಕೊಳ್ಳಬೇಕು. ಅಂತಿಮವಾಗಿ ವಿದ್ಯೆಗೆ ಪ್ರಾಮುಖ್ಯತೆ ಕೊಡಬೇಕು. ಇತ್ತೀಚಿನ ದಿನಗಳಲ್ಲಿ ವಿದ್ಯೆ ಎಲ್ಲರಲ್ಲೂ ಇದ್ದರೂ ವ್ಯಕ್ತಿತ್ವ ಮತ್ತು ಸಂಬಂಧ ಗಳನ್ನು ಉಳಿಸಿಕೊಳ್ಳುವಲ್ಲಿ ಕೊರತೆ ಕಾಣಿಸುತ್ತಿದೆಂದು ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆ ಮಿಯು ರಾಜ್ಯದ ಎಲ್ಲಾ ಬ್ಯಾರಿ ಭಾಷಿಕರು, ಸಂಘ-ಸಂಸ್ಥೆಗಳು ಅ.3 ರಂದು ಬ್ಯಾರಿ ಭಾಷಾ ದಿನವನ್ನು ಆಚರಿಸಬೇಕೆಂದು ಮನವಿ ಮಾಡಿದರ ಲ್ಲದೆ, ಈ ದಿನದಂದು ವಿವಿಧ ಸಾಂಸ್ಕೃ ತಿಕ ಕಾರ್ಯಕ್ರಮಗಳು, ಭಿತ್ತಿಪತ್ರ, ಬ್ಯಾನರ್‌ಗಳ ಪ್ರದರ್ಶನಗಳ ಮೂಲಕ ಭಾಷಾ ದಿನವನ್ನು ಆಚರಿಸಬೇಕು. ಈ ಬಾರಿ ಭಾಷಾ ದಿನಾಚರಣೆಯನ್ನು ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಬ್ಯಾರಿ ಅಕಾಡೆಮಿಯ ರಾಜ್ಯ ಮು ಖಂಡ ಬಿ.ಎಸ್.ಮೊಹಮ್ಮದ್, ಆಕ್ಸ್ ಫರ್ಡ್ ಶಾಲೆಯ ಮುಖ್ಯಸ್ಥ ಯಾದ್ಗಾರ್ ಜಾಕಿರ್, ಆನೆಮಹಲ್ ಹಸೇನಾರ್, ಬೇಲೂರು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಜಮಾಲ್, ಅಬ್ದುಲ್ಲ ಆಲೂರು ಉಪಸ್ಥಿತರಿದ್ದರು.

ಪಾಳ್ಯ ಗ್ರಾ.ಪಂ. ಅಧ್ಯಕ್ಷರಾಗಿ ಪ್ರೇಮಾ ಆಯ್ಕೆ

• ಪ್ರಜೋದಯ ವರದಿ

ಆಲೂರು: ತಾಲ್ಲೂಕಿನ ಪಾಳ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾ ಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಪ್ರೇಮ ಅಧ್ಯಕ್ಷರಾಗಿ ಹಾಗೂ ಚನ್ನ ಕೇಶವ ಉಪಾಧ್ಯಕ್ಷರಾಗಿ ಅವಿರೋಧ ವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷೆ ನೀಲಮ್ಮ ಹಾಗೂ ಉಪಾಧ್ಯಕ್ಷ ಅಶ್ವಥ್ ಅವರ ರಾಜೀ ನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಪ್ರೇಮ ಹಾಗೂ ಚನ್ನಕೇಶವ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾ ಧಿಕಾರಿಯಾಗಿ ಕರ್ತವ್ಯ ನಿರ್ವ ಹಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಸುಬ್ರಮಣ್ಯ ಶರ್ಮ ಅವಿರೋಧ ಆಯ್ಕೆ ಪ್ರಕಟಿಸಿ ದರು.

ನೂತನ ಅಧ್ಯಕ್ಷೆ ಪ್ರೇಮ, ಉಪಾ ಧ್ಯಕ್ಷ ಚನ್ನಕೇಶವ ಅವರು ಮಾತ ನಾಡಿ, ಅವಿರೋಧ ಆಯ್ಕೆಗೆ ಸಹಕರಿ ಸಿದ ಜೆಡಿಎಸ್ ಅಧ್ಯಕ್ಷ ಕೆ.ಎಸ್. ಮಂಜೇಗೌಡ, ಸಿ.ವಿ.ಲಿಂಗರಾಜು, ಪಿ.ಎಲ್. ನಿಂಗರಾಜು, ಎಸ್.ಎನ್. ಪ್ರಕಾಶ್, ಮಾಜಿ ಅಧ್ಯಕ್ಷ ಪುರು ಷೋತ್ತಮ್, ಕಲ್ಯಾಣ್ ಕುಮಾರ್ ಹಾಗು ಸದಸ್ಯರಿಗ

ರಾಜಕೀಯ ಕಾರಣಕ್ಕೆ ಸಮೀಕ್ಷೆ: ಆರ್.ಅಶೋಕ್

» ಮೊದಲನೇ ಪುಟದಿಂದ

ಯಿಂದಲೇ ನಾವೆಲ್ಲರೂ ದುಃಖ ಕ್ಕೊಳ ಗಾಗಿದ್ದೆವು. ತಮಿಳುನಾಡಿನಲ್ಲಿ ನಡೆದಿರುವ ದುರ್ಘಟನೆ ಆದಕ್ಕಿಂತಲೂ ದೊಡ್ಡದಾಗಿದೆ. ತಮಿಳುನಾಡಿನ ಡಿಎಂಕೆ ಸರ್ಕಾರ ನಟ ವಿಜಯ್ ವಿರುದ್ಧ ಪ್ರಕರಣ ದಾಖಲಿಸಲು ಮುಂದಾಗಿದೆ. ಡಿಎಂಕೆ ಸರ್ಕಾರ 10 ಸಾವಿರ ಜನರಿಗೆ ಅನುಮತಿ ನೀಡಿದೆ. ಆದರೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿಲ್ಲ. ಈ ಹಿಂದೆಯೇ ಸರ್ಕಾರಕ್ಕೆ ಕೋರ್ಟ್ ಸೂಚನೆ ನೀಡಿದ್ದರೂ, ಅದನ್ನು ಸರ್ಕಾರ ಧಿಕ್ಕರಿಸಿದೆ. ಈ ಅನಾಹುತಕ್ಕೆ ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರವೇ ನೇರ ಕಾರಣವೆಂದು ಆರೋಪಿಸಿದರು.

ನಟ ವಿಜಯ್ ಕೂಡಲೇ ಕ್ಷಮಾಪಣೆ ಕೇಳಿ, ಆಸ್ಪತ್ರೆಗೆ ಭೇಟಿ ನೀಡಬೇಕಿತ್ತು. ಅದನ್ನು ವಿಜಯ್ ಮಾಡಿಲ್ಲ. ಈ ಪ್ರಕರಣವನ್ನು ನಿವೃತ್ತ ನ್ಯಾಯ ಮೂರ್ತಿಯ ಸಮಿತಿಗೆ ತನಿಖೆಗೆ ನೀಡಬೇಕೆಂದು ಕರ್ನಾಟಕದ ಬಿಜೆಪಿ ಘಟಕ ಆಗ್ರಹಿಸುತ್ತಿದೆ ಎಂದರು.

ಬೆಳಗಾವಿ, ರಾಯಚೂರು, ವಿಜಯಪುರ ಮೊದಲಾದ ಭಾಗಗಳಲ್ಲಿ ಪ್ರವಾಸ ಮಾಡಿ ಮಳೆ ಹಾನಿ ಪರಿಶೀಲನೆ ಮಾಡುತ್ತೇನೆ. ಹಿಂದೆ ಬಿಜೆಪಿ ಇದ್ದಾಗ ಜನರಿಗೆ ಉತ್ತಮ ಪರಿಹಾರ ನೀಡಲಾಗಿತ್ತು. ಈಗ ಕಾಂಗ್ರೆಸ್ ಏನೂ ನೀಡುತ್ತಿಲ್ಲ. ರೈತರಿಗೆ ಬೆಳೆ ಪರಿಹಾರ ನೀಡಿಲ್ಲವೆಂದರು.

ಹಿಂದೂ ಧರ್ಮ ಎಂದೇ ಬರೆಸಿ

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ಎಲ್ಲರೂ ಹಿಂದೂ ಎಂದೇ ಉಲ್ಲೇಖ ಮಾಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು ಹಿಂದೂ ಎಂದು ಉಲ್ಲೇಖ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯೂ ಹೌದು. ವೀರಶೈವ-ಲಿಂಗಾಯತ ಒಕ್ಕಲಿಗ ದಲಿತ ಮತ್ತು ಹಿಂದುಳಿದ ಸಮುದಾಯಕ್ಕೆ ಸೇರಿದವರು ಗೊಂದಲ ಮಾಡಿಕೊಳ್ಳದೇ ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಸಬೇಕೆಂದು ಮನವಿ ಮಾಡಿದರು.

ಪ್ರವಾಹ : ಕೇಂದ್ರದಿಂದ ಅಗತ್ಯ ನೆರವು ನೀಡಲು ಬದ್ಧ

ಕಲ್ಬುರ್ಗಿ, ವಿಜಯಪುರ, ಬೀದರ್ ರಾಯಚೂರು ಜಿಲ್ಲಾಧಿಕಾರಿಗಳೊಂದಿಗೆ ದೂರವಾಣಿಯೊಂದಿಗೆ ಮಾತುಕತೆ ನಡೆಸಿದ ಹೆಚ್.ಡಿ.ಕೆ.

• ಪ್ರಜೋದಯ ವರದಿ

ಬೆಂಗಳೂರು : ಕಲ್ಯಾಣ ಕರ್ನಾಟಕ ಭಾಗದಲ್ಲಿ ಉಂಟಾಗಿರುವ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಕೇಂದ್ರ ಸರ್ಕಾರ ಅಗತ್ಯ ನೆರವನ್ನು ನೀಡಲು ಬದ್ಧವಾಗಿದೆ. ಈ ವಿಚಾರದಲ್ಲಿಕೇಂದ್ರ ಸರ್ಕಾರವು ಕರ್ನಾಟಕದ ಪರವಾಗಿ ದೃಢವಾಗಿ ನಿಲ್ಲುತ್ತದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಟ್ವೀಟ್ ಮಾಡಿರುವ ಅವರು, ನಮ್ಮ ಜನರ ಕ್ಷೇಮ ಮತ್ತು ಅವರ ಸುರಕ್ಷಿತ ಜೀವ ನೋಪಾಯಕ್ಕಾಗಿ ಕಾಳಜಿ ವಹಿಸಿ ಸಾಧ್ಯ ವಿರುವ ಎಲ್ಲಾ ಸಹಕಾರವನ್ನು ಕೇಂದ್ರವು ನೀಡಲಿದೆ ಎಂದು ಕೇಂದ್ರ ಸಚಿವನಾಗಿ ಖಚಿತ ಭರವಸೆ ನೀಡುತ್ತೇನೆ ಎಂದಿದ್ದಾರೆ. ಕಲ್ಯಾಣ ಕರ್ನಾಟಕದ ಕಲ್ಬುರ್ಗಿ, ವಿಜಯಪುರ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ ಸೇರಿ ವಿವಿಧ ಜಿಲ್ಲೆಗಳಲ್ಲಿ ಭಾರೀ ಪ್ರವಾಹ ಉಂಟಾಗಿ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರ ಕ್ಷೇಮಕ್ಕಾಗಿ ನಾನು ಹೃದಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಈ ಸಂಕಷ್ಟ ಕ ಸಮಯದಲ್ಲಿ ಪ್ರತಿ ಯೊಬ್ಬರ ಜೀವರಕ್ಷಣೆ, ಅಗತ್ಯ ಸೌಕರ್ಯ ಕಲ್ಪಿಸುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯ ಎಂದರು.

ನೆರೆ ಪೀಡಿತ ಪ್ರತಿ ತಾಲ್ಲೂಕಿ ನಲ್ಲಿ ಕಾಳಜಿ ಕೇಂದ್ರಗಳನ್ನು ತೆರೆ ಯಬೇಕು ಮತ್ತು ಎಲ್ಲ ತುರ್ತು ಸೌಲ ಭ್ಯಗಳು ಜನರಿಗೆ ಸುಲಭ ವಾಗಿ ಲಭ್ಯವಾಗುವಂತೆ ನೋಡಿ ಕೊಳ್ಳ ಬೇಕೆಂದು ಒತ್ತಾಯಿ ಸುತ್ತೇ ನೆಂದು ಟ್ವೀಟ್ ಮಾಡಿದ್ದಾರೆ.

ಕುಡಿಯುವ ನೀರು, ಉಡುಪು, ಹೊದಿಕೆ ಮತ್ತು ತುರ್ತು ಔಷಧಿಗಳ ಸಾಕಷ್ಟು ದಾಸ್ತಾನನ್ನು ವಿಳಂಬವಿಲ್ಲದೆ ಪ್ರವಾಹ ಪೀಡಿತ ಜಿಲ್ಲೆಗಳಿಗೆ ತಲುಪಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಎನ್ ಡಿಆರ್ಎಫ್, ಎಸ್ಟಿಆರ್ಎಫ್ ಸಿಬ್ಬಂದಿ ರಕ್ಷಣಾ ಕಾರ್ಯಗಳನ್ನು ಚುರುಕುಗೊಳಿಸಿ ವೃದ್ಧರು, ಮಹಿಳೆಯರು ಹಾಗೂ ಮಕ್ಕಳ ರಕ್ಷಣೆಗೆ ಹೆಚ್ಚು ಮುತುವರ್ಜಿ ವಹಿಸಬೇಕು. ವಿದ್ಯಾರ್ಥಿಗಳ ಬಗ್ಗೆಯೂ ವಿಶೇಷ ಗಮನ ಹರಿಸಬೇಕು. ಶಾಲೆಗಳ ಹಾಸ್ಟೆಲ್ ಮತ್ತು ಶಿಕ್ಷಣ ಸಂಸ್ಥೆಗಳನ್ನು ತಾತ್ಕಾಲಿಕ ಪರಿಹಾರ-ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಿ ನೆರೆ ಪೀಡಿತ ಕುಟುಂಬಗಳು, ಚಿಕ್ಕಮಕ್ಕಳು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಲು ಸೂಕ್ತ ವ್ಯವಸ್ಥೆ ಮಾಡುವಂತೆಯೂ ಅವರು ಒತ್ತಾಯಿಸಿದ್ದಾರೆ.

ನೆರೆ ಪೀಡಿತ ಸ್ಥಳಗಳಾದ ಕಲ್ಬುರ್ಗಿ, ವಿಜಯಪುರ, ಬೀದರ್ ರಾಯಚೂರು ಜಿಲ್ಲಾ ಧಿಕಾರಿಗಳೊಂದಿಗೆ ದೂರವಾಣಿಯೊಂದಿಗೆ ಮಾತುಕತೆ ನಡೆಸಿ ಪರಿಹಾರ ಕಾರ್ಯ ಆಗಿರುವ ನಷ್ಟದ ಬಗ್ಗೆ ಮಾಹಿತಿ ಪಡೆದು ಕ್ರಮ ವಹಿಸುವಂತೆ ಸೂಚಿಸಿದ್ದೇನೆಂದರು.

ಪರಮಾತ್ಮನ ಆರಾಧನೆಯಿಂದ ಮನಸ್ಸಿಗೆ ನೆಮ್ಮದಿ

» ಮೊದಲನೇ ಪುಟದಿಂದ

ಸಮುದಾಯಗಳಿಗೆ ನಗರದ ಆಯಾಕಟ್ಟಿನ ಜಾಗದಲ್ಲಿ ನಿವೇಶನ ಕೊಡಿಸುವ ಜೊತೆಗೆ ಸುಸಜ್ಜಿತ ಭವನ ಕಟ್ಟಿಸಿಕೊಡಲು ಪ್ರಯತ್ನ ಮಾಡಿ ದ್ದೇನೆ. ರಾಜಕೀಯ ಟೀಕೆ, ಟಿಪ್ಪಣಿಗಳ ನಡುವೆ ಕುಡಿಯುವ ನೀರು, ರಸ್ತೆ, ಶಿಕ್ಷಣ ಒಳಗೊಂಡಂತೆ ಮೂಲ ಸೌಕರ್ಯ ಒದಗಿಸಲಾಗಿದೆ. ವಿಶ್ವ ಕರ್ಮ ಸಮುದಾಯ ಭವನ ಪೂರ್ಣ ಗೊಳಿಸಲು ಸಂಪೂರ್ಣ ಸಹಕಾರ ನೀಡುತ್ತೇನೆಂದು ಭರವಸೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೆಟ್ರೊ ಬಾಬು ಅವರು ಮಾತನಾಡಿ, ಊಹಿ ಸಲು ಅಸಾಧ್ಯವಾದ ಶಿಲ್ಪಕಲಾ ಕೆತ್ತನೆ ಮೂಲಕ ಜನರನ್ನು ಬೆರಗುಗೊಳಿಸುವ ಕೆಲಸ ವಿಶ್ವಕರ್ಮ ಸಮುದಾಯ ನಿರಂತರವಾಗಿ ಮುನ್ನಡಿಸಿಕೊಂಡು ಬಂದಿದೆ. ಮಥುರಾ, ಅಯೋಧ್ಯೆ, ಸ್ವರ್ಗದ ಕಲ್ಪನೆ ಊಹಿಸಲು ಅಸಾಧ್ಯವೆಂದು ಬಣ್ಣಿಸಿದರು.

ಚನ್ನಗಿರಿ ತಾಲ್ಲೂಕಿನ ವಡ್ನಾಳು ವಿಶ್ವಕರ್ಮ ಮಹಾ ಸಂಸ್ಥಾನದ ಸಾವಿತ್ರಿ ಪೀಠ ಕಾಶೀಮಠದ ಶ್ರೀ ಶಂಕರಾತ್ಮಾನಂದ ಸ್ವಾಮೀಜಿ, ತಹಶೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್, ನಗರಸಭೆ ಅಧ್ಯಕ್ಷ ಸಮೀವುಲ್ಲಾ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್, ವಿಶ್ವಕರ್ಮ ಸಮುದಾಯದ ತಾಲ್ಲೂಕು ಅಧ್ಯಕ್ಷ ಯೋಗೇಶಾಚಾರ್ ಮಾತನಾಡಿದರು.

ಗ್ರೇಡ್ 2 ತಹಶೀಲ್ದಾರ್ ಪಾಲಾಕ್ಷ, ಜಿ.ಕುಮಾರ್, ಹರೀಶ್, ತಿಮ್ಮಾಚಾರ್, ಮಂಜುನಾಥ್ ಇತರರಿದ್ದರು.

ಜಿಲ್ಲೆಯಲ್ಲಿ ಶೇ.17 ರಷ್ಟು ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ

» ಮೊದಲನೇ ಪುಟದಿಂದ

ಗೃಹಜ್ಯೋತಿ ಕೈ ತಪ್ಪುವ ಭೀತಿ

ರಾಜ್ಯ ಸರ್ಕಾರದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಗೃಹ ಜ್ಯೋತಿ ಬಳಕೆದಾರರ ಮೇಲೆ ಪರಿಣಾಮ ಬೀರಿದೆ. ಗಣತಿಗೆ ಸಹಾಯವಾಗಲೆಂದು ಸೆಸ್ಕಾಂ ಸಿಬ್ಬಂದಿಯನ್ನು ಮನೆ ಮನೆಗೆ ಸ್ಟಿಕ್ಕರ್ ಹಾಗು ಜಿಯೋ ಟ್ಯಾಗ್ ಅಳವಡಿಸುವ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಆ. 23 ರಿಂದ ಸ್ಟಿಕ್ಕರ್ ಅಂಟಿಸುವ ಕಾರ್ಯದಲ್ಲಿದ್ದ ಅವರು ಸಮಯಕ್ಕೆ ಸರಿಯಾಗಿ ವಿದ್ಯುತ್ ರೀಡಿಂಗ್ ಮಾಡದೆ 35 ರಿಂದ 40 ದಿನಗಳ ವರೆಗೆ ಮಾಡಿದ್ದಾರೆ. ಹೀಗಾಗಿ ಕೆಲವು ಮನೆಗಳಿಗೆ 200ಕ್ಕಿಂತ ಅಧಿಕ ಯೂನಿಟ್ ಖರ್ಚಾಗಿದೆ. ಮೊದಲೆಲ್ಲಾ 200 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಸಿದ್ದರೆ ಅಂತವರಿಗೆ ಬಿಲ್ ಬರುತ್ತಿರಲಿಲ್ಲ. ಆದರೆ ಈ ಬಾರಿ ಒಂದು ತಿಂಗಳಷ್ಟಲ್ಲೇ ಅಲ್ಲದೆ ಅಧಿಕ ಅವಧಿಯ ಬಿಲ್ ಬಂದಿರುವುದರಿಂದ ಬಳಕೆಯಾದ ಯೂನಿಟ್ ಪ್ರಮಾಣ ಹೆಚ್ಚಾಗಿದೆ. ಹಾಗಾಗಿ ಅಂತಹ ಕುಟುಂಬಸ್ಥರು ಈ ತಿಂಗಳು ಬಿಲ್ ಪಾವತಿಸುವುದು ಮಾತ್ರವಲ್ಲದೆ ಶಾಶ್ವತವಾಗಿ ಗೃಹಜ್ಯೋತಿ ಯೋಜನೆ ಯಿಂದ ದೂರವುಳಿಯುವ ಆತಂಕ ಅನೇಕರನ್ನು ಕಾಡುತ್ತಿದೆ.

ಪದಾರ್ಪಣೆ ಪಂದ್ಯದಲ್ಲೇ ದಾಖಲೆ ಬರೆದ ಚಾಹರ್

• ಪ್ರಜೋದಯ ವರದಿ

ಲಂಡನ್: ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್‌ಗೆ ಸರ್ರೆ ತಂಡದ ಪರ ಪದಾರ್ಪಣೆ ಮಾಡಿರುವ ಭಾರತದ ಲೆಗ್ ಸ್ಪಿನ್ನರ್ ರಾಹುಲ್ ಚಾಹರ್ ಅವರು, ಅತ್ಯುತ್ತಮ ಬೌಲಿಂಗ್ ಪ್ರದರ್ಶನದ ಮೂಲಕ 166 ವರ್ಷಗಳ ಹಿಂದಿನ ದಾಖಲೆ ಮುರಿದಿದ್ದಾರೆ.

ಸೌತಾಂಪ್ಟನ್‌ನ ದಿ ರೋಸ್ ಬೌಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ಅಮೋಘ ಬೌಲಿಂಗ್ ಮಾಡಿದ ರಾಹುಲ್, 118 ರನ್ ನೀಡಿ ಒಟ್ಟು 10 ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. ಅವರ ಆಟದ ಬಲದಿಂದ ಸರ್ರೆ ತಂಡವು, ಹ್ಯಾಂಪ್‌ಶೈರ್ ವಿರುದ್ಧ 20 ರನ್ ಅಂತರದ ಜಯ ಸಾಧಿಸಿತು.

ಬುಧವಾರ ಆರಂಭವಾದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಸರ್ರೆ, 147 ರನ್‌ಗೆ ಆಲೌಟ್ ಆಗಿತ್ತು. ಇದಕ್ಕುತ್ತರವಾಗಿ ಹ್ಯಾಂಪ್‌ಶೈರ್ 248 ರನ್ ಕಲೆಹಾಕಿತ್ತು.

101 ರನ್‌ಗಳ ಹಿನ್ನಡೆಯೊಂದಿಗೆ 2ನೇ ಇನಿಂಗ್ಸ್ ಆರಂಭಿಸಿದ ಸರ್ರೆ, 281 ರನ್ ಗಳಿಸಿ 181 ರನ್‌ಗಳ ಗುರಿಯೊಡ್ಡಿತ್ತು. ಆದರೆ, ರಾಹುಲ್ ದಾಳಿಗೆ ನಲುಗಿದ ಹ್ಯಾಂಪ್‌ಶೈರ್, 160 ರನ್ ಗಳಿಸುವಷ್ಟರಲ್ಲೇ ಸರ್ವಪತನ ಕಂಡಿತು.

ರಾಹುಲ್ ಸಾಧನೆ

ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 67 ರನ್ ಗೆ ಎರಡು ವಿಕೆಟ್ ಪಡೆದಿದ್ದ ರಾಹುಲ್, 2ನೇ ಇನಿಂಗ್ಸ್‌ನಲ್ಲಿ 51 ರನ್ ನೀಡಿ 8 ವಿಕೆಟ್ ಕಬಳಿಸಿದರು. ಇದ ರೊಂದಿಗೆ, ಪದಾರ್ಪಣೆ ಪಂದ್ಯದ ಇನಿಂಗ್ಸ್‌ವೊಂದರಲ್ಲಿ ಶ್ರೇಷ್ಠ ಸಾಧನೆ ಮಾಡಿದ ಖ್ಯಾತಿಗೆ ಭಾಜನರಾದರು. 1859ರಲ್ಲಿ ವಿಲಿಯನ್ ಎಂ.ಮಾರ್ಕ್ ಅವರು 61 ರನ್‌ಗೆ 7 ವಿಕೆಟ್ ಪಡೆದಿದ್ದರು. ಅದು ಈವರೆಗೆ ದಾಖಲೆಯಾಗಿತ್ತು.

ರಾಹುಲ್, ಪ್ರಥಮದರ್ಜೆ ಕ್ರಿಕೆಟ್ ಪಂದ್ಯದ ಇನಿಂಗ್ಸ್‌ವೊಂದರಲ್ಲಿ 8 ವಿಕೆಟ್ ಪಡೆದದ್ದು ಇದೇ ಮೊದಲು.

ಸುಂದರ್‌ಗೆ ಟೆಸ್ಟ್ ತಂಡದಲ್ಲಿ ಸ್ಥಾನ

ಹ್ಯಾಂಪ್‌ಶೈರ್ ಪರ ಆಡಿದ ಭಾರತದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್, ಮೊದಲ ಇನಿಂಗ್ಸ್‌ನಲ್ಲಿ 3.2 ಓವರ್‌ಗಳಲ್ಲೇ ಕೇವಲ 5 ರನ್‌ಗೆ ಮೂರು ವಿಕೆಟ್ ಪಡೆದರು. ಆದರೆ, ಎರಡನೇ ಇನಿಂಗ್ಸ್‌ನಲ್ಲಿ 12 ಓವರ್ ಎಸೆದರೂ ವಿಕೆಟ್ ಪಡೆಯಲು ವಿಫಲರಾ ದರು. ಬ್ಯಾಟಿಂಗ್ ವೇಳೆ ಕ್ರಮವಾಗಿ 56 ರನ್ ಮತ್ತು 11 ರನ್ ಗಳಿಸಿದರು.

ವೆಸ್ಟ್ ಇಂಡೀಸ್ ವಿರುದ್ಧ ಅಕ್ಟೋಬರ್ 2 ರಿಂದ ಆರಂಭವಾಗಲಿರುವ 2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆಡುವ ಭಾರತ ತಂಡ ದಲ್ಲಿ ಸುಂದರ್ ಸ್ಥಾನ ಪಡೆದಿದ್ದಾರೆ. ಭಾರತ ಪರ 13 ಟೆಸ್ಟ್ 23 ಏಕದಿನ ಹಾಗೂ 54 ಟಿ20 ಪಂದ್ಯ ಗಳಲ್ಲಿ ಕಣಕ್ಕಿಳಿದಿರುವ ಸುಂದರ್, ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಉಪ ಯುಕ್ತ ಆಟವಾಡಿದ್ದಾರೆ. ರಾಹುಲ್, ಟೀಂ ಇಂಡಿಯಾ ಪರ 2019ರಿಂದ 2021ರ ಅವಧಿ ಯಲ್ಲಿ ಒಂದು ಏಕದಿನ ಮತ್ತು ಆರು ಟಿ-20 ಪಂದ್ಯಗಳಲ್ಲಿ ಆಡಿದ್ದಾರೆ.

ರಿಯಾಯಿತಿ ದರದಲ್ಲಿ ಬಟ್ಟೆ: ಗುಂಪು ಚದುರಿಸಲು ಲಾಠಿ ಪ್ರಹಾರ

• ಪ್ರಜೋದಯ ವರದಿ

ಹಾಸನ: ಕೇವಲ 50 ರೂಪಾಯಿಗೆ 1 ಶರ್ಟ್ ಎಂಬ ರಿಯಾಯಿತಿ ದರದ ಮಾರಾಟ ವ್ಯವಸ್ಥೆಯು ನಗರದಲ್ಲಿ ಹೆಚ್ಚುತ್ತಿದ್ದು, ಸಾರ್ವಜನಿಕರ ನಿಯಂತ್ರಣಕ್ಕೆ ಪೊಲೀಸರು ಹರಸಾಹಸ ಪಡುವಂತಾಗಿದೆ.

ನಗರದ ರಿಂಗ್ ರಸ್ತೆಯ ಅರುಣ್ ಅಡ್ಡ ಮೆನ್ಸ್ ವೇರ್ ಪ್ರಾರಂಭೋತ್ಸವ ಅಂಗವಾಗಿ ಭಾನುವಾರ ಬೆಳಿಗ್ಗೆ 7 ರಿಂದ 9ರ ವರೆಗೆ ಕಡಿಮೆ ಬೆಲೆಯಲ್ಲಿ ಶರ್ಟ್‌ಗಳ ವಿತರಿಸುವುದಾಗಿ ಪ್ರಚಾರ ಮಾಡಲಾಗಿತ್ತು. ಬೆಳಿಗ್ಗೆ 6 ಗಂಟೆ ಯಿಂದಲೇ ಸಾರ್ವಜನಿಕರು ತಂಡೋಪ ತಂಡವಾಗಿ ಸರದಿ ಸಾಲಿನಲ್ಲಿ ನಿಂತಿದ್ದರು.

ಆಂಗಡಿ ತೆರೆದ ತಕ್ಷಣ ಮಹಿಳೆಯರು ಮತ್ತು ಪುರುಷರು ಸರದಿಯಲ್ಲಿ ನಿಂತು ಬಟ್ಟೆ ಖರೀದಿಸಲು ಆರಂಭಿಸಿದರು. ಸ್ವಲ್ಪ ಸಮಯ ಎಲ್ಲವೂ ಶಾಂತವಾಗಿ ನಡೆಯುತ್ತಿತ್ತಾದರೂ ನಂತರ ಜನದಟ್ಟಣೆ ಹೆಚ್ಚಾಯಿತು. ನೂಕಾಟದಲ್ಲಿ ಬ್ಯಾರಿಕೇಡ್ ಬಿದ್ದಿದ್ದರಿಂದ ಯುವಕರು ಒಬ್ಬರ ಮೇಲೋಬ್ಬರು ಬಿದ್ದರು. ಪರಿಸ್ಥಿತಿ ನಿಭಾಯಿಸಲು ಪೊಲೀಸರು ಲಾಠಿ ಪ್ರಹಾರ ಮಾಡಬೇಕಾಯಿತು.

ಆಂಗಡಿ ಮಾಲೀಕ ಅರುಣ್ ಅವರು ಮಾತನಾಡಿ, ಕಡಿಮೆ ದರ ದಲ್ಲಿ ಜನರಿಗೆ ಬಟ್ಟೆ ಒದಗಿಸಬೇಕೆಂಬ ಉದ್ದೇಶದಿಂದ ಆಂಗಡಿ ತೆರೆಯ ಲಾಗಿದೆ. ಪ್ರತಿ ಭಾನುವಾರ ರಿಯಾಯಿತಿ ಇರುತ್ತದೆ. ಸಾರ್ವಜನಿಕರು ಸಂಯಮದಿಂದ ವರ್ತಿಸಬೇಕೆಂದು ಮನವಿ ಮಾಡಿದರು.

ಕಳೆದ ಎರಡು ತಿಂಗಳ ಹಿಂದೆ ಸಹ್ಯಾದ್ರಿ ಚಿತ್ರಮಂದಿರ ಹಿಂಭಾಗದ ರಸ್ತೆಯಲ್ಲೂ ಇದೇ ರೀತಿ ನೂಕು ನುಗ್ಗಲು ಉಂಟಾಗಿ ಪೊಲೀಸರು ಲಾಠಿ ಪ್ರಹಾರ ಮಾಡಿದ್ದು, ಜನರು ಓಡಿ ಹೋಗಿದ್ದಾರೆ.

ಜುಬಿನ್‌ಗೆ ಗೌರವ ಸಲ್ಲಿಸಲು ನಿರ್ಧಾರ

ಗುವಾಹಟಿ: ದುರ್ಗಾಪೂಜೆ ಸಡಗರದ ವೇಳೆಯೇ ಬಂದಿರುವ ಮಹಿಳಾ ವಿಶ್ವಕಪ್ ಟೂರ್ನಿ ಇಲ್ಲಿ ಉದ್ಘಾಟನೆಯಾಗುತ್ತಿರುವುದು ಈ ಭಾಗದ ಜನರಲ್ಲಿ ಸಂಭ್ರಮದ ವಾತಾವರಣಕ್ಕೆ ಕಾರಣವಾಗುತಿತ್ತು. ಆದರೆ ಈ ಬಾರಿಯ ವಾತಾವರಣ ಭಿನ್ನವಾಗಿದೆ.

ಜನಪ್ರಿಯ ಗಾಯಕ ಮತ್ತು ಈಶಾನ್ಯ ರಾಜ್ಯಗಳ ಸಾಂಸ್ಕೃತಿಕ ಐಕನ್ ಆಗಿರುವ ಜುಬಿನ್ ಗಾರ್ಗ್ (52) ಅವರ ದುರಂತ ಸಾವಿನ ಶೋಕ ದಿಂದ ಅಸ್ಸಾಂ ನಗರ, ಹಳ್ಳಿಗಳು ಇನ್ನೂ ಸಂಪೂರ್ಣ ಹೊರಬಂದಿಲ್ಲ. ಜುಬಿನ್‌ದಾ ಅವರಿಗೆ ಲಕ್ಷಾಂತರ ಅಭಿಮಾನಿಗಳಿದ್ದಾರೆ. ಸೆ. 19 ರಂದು ಮೃತಪಟ್ಟ ಅವರು 40 ಭಾಷೆಗಳಲ್ಲಿ 38,000 ಹಾಡುಗಳನ್ನು ಹಾಡಿದ್ದಾರೆ.

ಹೊಯ್ಸಳೋತ್ಸವಕ್ಕೆ ನವ ಕರ್ನಾಟಕ ಸಂಘಟನೆ ಆಗ್ರಹ

• ಪ್ರಜೋದಯ ವರದಿ

ಹಾಸನ: ಹೊಯ್ಸಳರ ಕಾಲದ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಪ್ರತಿ ವರ್ಷ ಹೊಯ್ಸಳೋತ್ಸವ ಆಯೋಜನೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನವ ಕರ್ನಾಟಕ ಯುವ ಶಕ್ತಿ ಸಂಘಟನೆ ರಾಜ್ಯಾಧ್ಯಕ್ಷ ಕೆ.ಎನ್. ಲಿಂಗೇಗೌಡ ಅವರು ಆಗ್ರಹಿಸಿದರು.

ನವ ಕರ್ನಾಟಕ ಯುವ ಶಕ್ತಿ ಸಂಘಟನೆಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹೊಯ್ಸಳೋತ್ಸವ ಮೆರವಣಿಗೆಗೆ ಬಿಎಂ ರಸ್ತೆಯ ಪೃಥ್ವಿ ಚಿತ್ರಮಂದಿರ ಸಮೀಪ ಚಾಲನೆ ನೀಡಿ ಮಾತನಾಡಿದ ಅವರು, ಹೊಯ್ಸಳ ಉತ್ಸವಮೆಂದರೆ ಕೇವಲ ಮನರಂಜನೆಯಲ್ಲ. ಮುಂದಿನ ಪೀಳಿಗೆಗೆ ನಾಡಿನ ಶ್ರೇಷ್ಠ ಪರಂಪರೆ, ಕಲೆ ಮತ್ತು ಸಂಸ್ಕೃತಿ ಪರಿಚಯಿಸುವ ಪ್ರಯತ್ನವೂ ಆಗಲಿದೆ ಎಂದರು.

11ನೇ ಶತಮಾನದಿಂದ 16ನೇ ಶತಮಾನದವರೆಗೆ ಹೊಯ್ಸಳರ ಆಳ್ವಿಕೆ ಅಮೋಘವಾಗಿತ್ತು. ದಕ್ಷಿಣ ಭಾರತ ವನ್ನು ವ್ಯಾಪಿಸಿದ್ದ ಸಾಮ್ರಾಜ್ಯ ಸಂಸ್ಕೃತಿ, ಕಲೆಗೆ ಪ್ರಸಿದ್ಧವಾಗಿತ್ತು. ಹೊಯ್ಸಳ ಸಾಮ್ರಾಟರು ಈ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಬೇಲೂರು, ಹಳೇಬೀಡು, ಸೋಮ ನಾಥಪುರ ಸೇರಿ 25ಕ್ಕೂ ಹೆಚ್ಚು ಜಗತ್ತಿ ನಲ್ಲಿ ಇಲ್ಲವಾದಂತಹ ವೈವಿಧ್ಯಮಯ ಸೂಕ್ಷ